# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 02-11-2015ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಎಮ್. ಶಿವರಾಜು – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಜಂಟಿ ಆಯುಕ್ತರು (ಆರೋಗ್ಯ), |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | ಮುಖ್ಯ ಆರ್ಥಿಕ ಅಧಿಕಾರಿ, ಉಪ ನಿಯಂತ್ರಕರು ಹಣಕಾಸು |
| ನೇತ್ರಾ ನಾರಾಯಣ್ – ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| ಉಮೇಸಲ್ಮ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ), (ಸಾರಿಗೆ), |
| ಎ. ಕೋದಂಡರೆಡ್ಡಿ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ–ಪಶ್ಚಿಮ) |
| ಕೆ. ಪೂರ್ಣಿಮ – ಸದಸ್ಯರು | ಮಾಹಿತಿ ತಂತ್ರಜ್ಞಾನ ಸಲಹೆಗಾರರು |
| ಕುಸುಮ. ಹೆಚ್ – ಸದಸ್ಯರು | ಸಹಾಯಕ ಅಭಿಯಂತರರು (ಯೋಜನೆ–ದಕ್ಷಿಣ), |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು |
| ಅರುಣ ರವಿ – ಸದಸ್ಯರು | ---------- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

## *01]. ವಿಷಯದ ಸಂಖ್ಯೆಃ ತೆಆಸ್ಥಾಸ/01/2014-15*

ಆಯುಕ್ತರ ದಿನಾಂಕ: 24.08.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 24.06.2015ರಂದು ಮಾನ್ಯ ಆಡಳಿಗಾರರ ನಡವಳಿ ವಿಷಯ ಸಂಖ್ಯೆ: 89/2015-16ರಲ್ಲಿ ಉದ್ದಿಮೆ ಪರವಾನಿಗೆ ಶುಲ್ಕವನ್ನು ಹೆಚ್ಚಿಸುವ ಸಂಬಂಧ ನಿರ್ಣಯವನ್ನು ಮುಂದೂಡಲಾಗಿತ್ತು. ಪಾಲಿಕೆಯ ಆದಾಯ ಹಿತದೃಷ್ಟಿಯಿಂದ ಹಾಗೂ ಪರವಾನಿಗೆ ಶುಲ್ಕ ಪರಿಷ್ಕರಣೆಯನ್ನು 2007ರಲ್ಲಿ ಮಾಡಿದ್ದು ತದನಂತರ ಪರಿಷ್ಕರಣೆಯಾಗಿರುವುದಿಲ್ಲ. ಸಾರ್ವಜನಿಕ ಆರೋಗ್ಯ ರಕ್ಷಣೆಯು ಪೌರ ಆಡಳಿತಾಧಿಕಾರಿಗಳ ಕರ್ತವ್ಯಗಳಲ್ಲಿ ಅತ್ಯಂತ ಪ್ರಮುಖವಾಗಿದೆ. ಸಾರ್ವಜನಿಕ ಆರೋಗ್ಯವನ್ನು ನಿಯಂತ್ರಿಸುವಲ್ಲಿ, 1976ರ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ ಕಾಯ್ದೆಯನ್ವಯ, ಕಾರ್ಯಕರ್ತರು, ಗ್ರಾಹಕರು ಹಾಗೂ ಸಾರ್ವಜನಿಕ ಆರೋಗ್ಯ ಸುರಕ್ಷತೆಯನ್ನು ಕಾಪಾಡಲು ಜಾರಿಗೊಳಿಸಬಹುದಾದ ನಿಯಮಗಳನ್ನು ರಚಿಸಲಾಗಿದೆ. ಸಾರ್ವಜನಿಕ ಆರೋಗ್ಯದ ಮೇಲೆ ನೇರ ಪರಿಣಾಮವನ್ನು ಬೀರುವ ಉದ್ದಿಮೆಗಳನ್ನು ಉಸ್ತುವಾರಿ ಮಾಡಲು, ಉದ್ದಿಮೆಯನ್ನು ಪ್ರಾರಂಭಿಸುವ ಮೊದಲು ಪಡೆಯಬೇಕಾದ ಅಗತ್ಯ ಪರವಾನಗಿಗಳ ಪಟ್ಟಿಯನ್ನು ಈ ಕಾಯ್ದೆಯ ಅನುಸೂಚಿ 10ರಲ್ಲಿ ನೀಡಲಾಗಿದೆ. ಉದ್ದಿಮೆ ಪರವಾನಗಿಯು ಒಂದು ಆಡಳಿತಾತ್ಮಕ ಕಾರ್ಯವಾಗಿದ್ದು, ಕೆಲವು ಸರಕು ಹಾಗೂ ಸೇವೆಗಳ ವಹಿವಾಟನ್ನು ನಡೆಸಲು ಪಾಲಿಕೆಯ ಅನುಮತಿ ಪಡೆಯುವುದು ಅಗತ್ಯವಾಗಿರುತ್ತದೆ. ಯಾವುದೇ ವ್ಯಕ್ತಿಗಳು ಅನುಸೂಚಿಯಲ್ಲಿ ನಮೂದಿಸಿರುವ ಉದ್ದಿಮೆಯನ್ನು ಪ್ರಾರಂಭಿಸುವ ಮುನ್ನ ಉದ್ದಿಮೆಯ ಪರವಾನಗಿಯನ್ನು ಪಡೆಯದಿದ್ದಲ್ಲಿ, ಸಾರ್ವಜನಿಕ ಆರೋಗ್ಯವನ್ನು ರಕ್ಷಿಸುವ ಸಲುವಾಗಿ ಅಂತಹ ಪರವಾನಗಿ ರಹಿತ ಉದ್ದಿಮೆಗಳನ್ನು ಮುಚ್ಚಬೇಕಾಗುತ್ತದೆ. ಕೆಎಂಸಿ ಕಾಯ್ದೆಯ ಪರಿಚ್ಛೇದ (ಸೆಕ್ಷನ್) 353ಯು ಆಯುಕ್ತರಿಂದ ಪರವಾನಗಿ ಪಡೆಯದೇ ಹಾಗೂ ಪರವಾನಗಿಯಲ್ಲಿ ನಮೂದಿಸಿರುವ ನಿಬಂಧನೆಗಳನ್ನು ಪಾಲಿಸದೇ ನಗರದ ಮಿತಿಯೊಳಗಿನ ಯಾವುದೇ ಸ್ಥಳವನ್ನು ಅನುಸೂಚಿ 10ರಲ್ಲಿ ನಮೂದಿಸಿರುವ ಯಾವುದೇ ಕಾರ್ಯಗಳಿಗೆ ಬಳಸುವಂತಿಲ್ಲ ಎನ್ನುವುದು ನಿರ್ದಿಷ್ಟ ಪಡಿಸುತ್ತದೆ.

ಕೆ.ಎಂ.ಸಿ. ಕಾಯ್ದೆ ಅಡಿಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಧೀಕೃತ ಸಾರ್ವಜನಿಕ ಆರೋಗ್ಯ ಪ್ರಾಧಿಕಾರವಾಗಿದ್ದು, ತನ್ನ ವ್ಯಾಪ್ತಿಗೆ ಒಳಪಡುವ ಸಾರ್ವಜನಿಕರ ಆರೋಗ್ಯವನ್ನು ಪ್ರೋತ್ಸಾಹಿಸುವ, ರಕ್ಷಿಸುವ ಹಾಗೂ ಉತ್ತಮ ಪಡಿಸುವ ಗುರಿಯನ್ನು ಹೊಂದಿರುತ್ತದೆ. ವಿವಿಧ ವೃತ್ತಿಗಳಿಗೆ, ಉದ್ದಿಮೆಗಳಿಗೆ ಹಾಗೂ

ಉದ್ಯೋಗಗಳಿಗೆ ಉದ್ದಿಮೆ ಪರವಾನಗಿಗಳನ್ನು ನೀಡುವ ಕಾರ್ಯವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯದ್ದಾಗಿರುತ್ತದೆ. ಸದರಿ ಇಲಾಖೆಯ ಆರೋಗ್ಯ ಸಂಬಂಧಿತ ಸಂಸ್ಥೆಗಳಿಗಷ್ಟೆ (ಉದಾ: ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ಪ್ರಯೋಗಾಲಯಗಳು ಹಾಗೂ ತಪಾಸಣಾ ಕೇಂದ್ರಗಳು) ಅಲ್ಲದೆ ಸಾರ್ವಜನಿಕ ಆರೋಗ್ಯ ಹಾಗೂ ಸುರಕ್ಷೆಯ ಮೇಲೆ ಪರಿಣಾಮ ಬೀರುವ ವೃತ್ತಿಗಳಲ್ಲಿ (ಉದಾ:ಕ್ಷೌರಿಕರು, ಬ್ಯೂಟಿ ಪಾರ್ಲರ್ ನಡೆಸುವವರು, ಅಗಸರು, ವಸತಿ ಹಾಗೂ ಭೋಜನ ಗೃಹಗಳನ್ನು ನಡೆಸುವವರು, ಆಹಾರ ಮತ್ತು ಪಾನೀಯ ವಸ್ತುಗಳ ತಯಾರಕರು) ನಿರತರಾದ ವ್ಯಕ್ತಿಗಳಿಗೂ ಸಹ ಪರವಾನಗಿಯನ್ನು ನೀಡುತ್ತದೆ. ಈ ಇಲಾಖೆಯು, ಪರಿಸರಕ್ಕೆ ಸಂಬಂಧಿಸಿದ ವಿಷಯಗಳನ್ನು ನಿಯಂತ್ರಿಸಲು ಇಂಧನ ಚಾಲಿತ ಕೈಗಾರಿಕೆಗಳಿಗೂ ಸಹ ಪರವಾನಗಿಯನ್ನು ಪರಿಚ್ಛೇದ (ಸೆಕ್ಷನ್) 354 ರಂತೆ ನೀಡಲಾಗುತ್ತಿದೆ.

2003 ರಲ್ಲಿ ಸರಳ ಉದ್ಯಮ ಪರವಾನಗಿಯನ್ನು ಜಾರಿಗೊಳಿಸುವುದರ ಮೂಲಕ ಪರವಾನಗಿಯನ್ನು ನೀಡುವ ಕಾರ್ಯವನ್ನು ಸರಳೀಕರಿಸಲಾಗಿದೆ. 2007ರಲ್ಲಿ ಸುವರ್ಣ ಕರ್ನಾಟಕದ ಆಚರಣೆಯ ಅಂಗವಾಗಿ ಸುವರ್ಣ ಆರೋಗ್ಯ ಪರವಾನಗಿ ಯೋಜನೆಯ ಮೂಲಕ ಉದ್ದಿಮೆಗಳ ಪರವಾನಗಿಯನ್ನು ಮತ್ತಷ್ಟು ಸರಳೀಕರಿಸಲಾಗಿದೆ. ಈ ಅವಧಿಯಲ್ಲಿ ಪರವಾನಗಿ ಶುಲ್ಕವನ್ನು ಪರಿಷ್ಕರಿಸಲಾಗಿದ್ದು, ತದನಂತರ ಇಲ್ಲಿಯವರೆಗೂ ಪರಿಷ್ಕರಿಸಿರುವುದಿಲ್ಲ. ಇದಕ್ಕೆ ಮುಂಚಿತವಾಗಿ 1999ರಲ್ಲಿ ಶುಲ್ಕವನ್ನು ಪರಿಷ್ಕರಿಸಲಾಗಿತು.
ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಆನ್‌ಲೈನ್ ಮುಖಾಂತರ 2010–11ರ ಸಾಲಿನಲ್ಲಿ ಪರವಾನಗಿ ಮಂಜೂರಾತಿ ಮತ್ತು ನವೀಕರಣವನ್ನು ಹಮ್ಮಿಕೊಳ್ಳಲಾಯಿತು. ಕಾರಣಾಂತರಗಳಿಂದ ಇದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ. ತದನಂತರ 2014–15ರ ಸಾಲಿನಲ್ಲಿ ಆನ್‌ಲೈನ್ ಮುಖಾಂತ ಪರವಾನಗಿ ನವೀಕರಣ ಕಡ್ಡಾಯವಾಗಿ ಮಾಡಲು ಪ್ರಾರಂಭಿಸಲಾಯಿತು. 2015–16ರ ಸಾಲಿನ ಪರವಾನಗಿ ನವೀಕರಣ ಜೊತೆಯಲ್ಲಿ ಹೊಸ ಪರವಾನಗಿ ಮಂಜೂರಾತಿಯನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಪ್ರಾರಂಭಿಸಲಾಯಿತು. ಈ ಹಿಂದೆ ಒಂದಕ್ಕಿಂತ ಹೆಚ್ಚು ವ್ಯಾಪಾರಗಳನ್ನು ಒಂದೇ ಸ್ಥಳದಲ್ಲಿ ಮಾಡುತ್ತಿದ್ದರೆ ನೀಡಬೇಕಾದ ಗರಿಷ್ಠ ಶುಲ್ಕದ ಎರಡರಷ್ಟು ಮೊತ್ತದ ಸಮಾನ ಮೊತ್ತವನ್ನು ಪಾವತಿಸಿದ್ದಲ್ಲಿ ಒಂದಕ್ಕಿಂತ ಹೆಚ್ಚಿನ ವ್ಯಾಪಾರಗಳನ್ನು ಮಾಡಬಹುದಾಗಿದೆ. 2014–15ರ ಸಾಲಿನಲ್ಲಿ ಇದನ್ನು ರದ್ದು ಪಡಿಸಿ ವಿವಿಧ ತರದ ಉದ್ದಿಮೆಗಳಿಗೆ ಅಗತ್ಯ ಶುಲ್ಕವನ್ನು ಪಾವತಿಸಿಕೊಂಡು ಪರವಾನಗಿ ವಿತರಿಸಲು ಆದೇಶವಾಗಿರುತ್ತದೆ.
ಮಾನ್ಯ ಆಯುಕ್ತರು ಉದ್ದಿಮೆ ಪರವಾನಗಿ ಮಂಜೂರಾತಿ ನವೀಕರಣ ಹಾಗೂ ರದ್ದು ಪಡಿಸುವ ಅಧಿಕಾರವನ್ನು ವಲಯ ಅಧಿಕಾರಿಗಳಿಗೆ ಪ್ರತ್ಯಾಯೋಜನೆ ಮಾಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಪ್ರದೇಶಗಳಲ್ಲಿ ಚದರ ಅಡಿಗೆ ದರವು ವಿಪರೀತವಾಗಿ ಹೆಚ್ಚಾಗಿದ್ದು 2007 ರಿಂದ ಪರವಾನಗಿ ಶುಲ್ಕವನ್ನು ಹೆಚ್ಚಿಸಿರುವುದಿಲ್ಲ. *The consumer Price Index (CPI) approx. for the year 2007 for Bangalore was Rs. 131/- for the year2015 was Rs. 258/-. The Gross State Domestic product price (GSDP) for the city of Bangalore for the year 2007 was Rs. 202660 Crores only which is 10% and GSDP for the year 2012-13 for Bangalore was 296658 Crores which is 5.3%.*

**ಅದರಂತೆ ಪರವಾನಗಿ ಶುಲ್ಕವನ್ನು ಹೆಚ್ಚಿಸುವ ಸಂಬಂಧ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ.**

| ಕ್ರಮ ಸಂಖ್ಯೆ | ಉದ್ದಿಮೆ ವಿವರ | | ಹಾಲಿ ಇರುವ ಶುಲ್ಕ | ಪ್ರಸ್ತಾಪಿಸಿರುವ ಶುಲ್ಕ | ಷರಾ |
|---|---|---|---|---|---|
| | | **ಭಾಗ ಸಂಖ್ಯೆ:– 1** | | | |
| 1 | **ಬ್ರೆಡ್, ಬಿಸ್ಕತ್, ಪ್ಯಾಸ್ಟ್ರಿ, ಕಾನ್‌ಫೆಕ್ಷನರಿ, ಕಾಂಡಿಮೆಂಟ್ಸ್ ಮತ್ತು ಸೇವರಿಗಳು** | | | | |
| | **(i)** | **10 ಹೆಚ್ ಪಿ ಮತ್ತು ಮೇಲ್ಪಟ್ಟು ವಿದ್ಯುತ್ ನಿಂದ ತಯಾರಿಸುವುದು** | **5,000** | **10,000** | |
| | **(ii)** | **10 ಹೆಚ್ ಪಿ ಗಿಂತ ಕೆಳಪಟ್ಟು ವಿದ್ಯುತ್ ನಿಂದ ತಯಾರಿಸುವುದು** | **3,000** | **5,000** | **ಹೊಸ ಅನುಸೂಚಿ** |
| | **(iii)** | **ವಿದ್ಯುತ್ ಇಲ್ಲದೆ ತಯಾರಿಸುವದೂ ಒಳಗೊಂಡಂತೆ ಇತರೆ** | **3,000** | **4,000** | |
| | **(iv)** | **ಶೇಖರಣೆ ಮತ್ತು ಸೇವಾ ಪ್ರದೇಶ 2000ಚ.ಅಡಿ ಮೀರುವ ಚಿಲ್ಲರೆ ಅಂಗಡಿಗಳು** | **2,000** | **3,000** | |
| | **(v)** | **ಶೇಖರಣೆ ಮತ್ತು ಸೇವಾ ಪ್ರದೇಶ 500 ಯಿಂದ 2000 ಚ.ಅಡಿ ವರಗೆ ಚಿಲ್ಲರೆ ಅಂಗಡಿಗಳು** | **1,000** | **2,000** | |

| | | | | | |
|---|---|---|---|---|---|
| | (vi) | ಶೇಖರಣೆ ಮತ್ತು ಸೇವಾ ಪ್ರದೇಶ 100 ಯಿಂದ 500ಚ.ಅಡಿ ವರೆಗೆ ಚಿಲ್ಲರೆ ಅಂಗಡಿಗಳು | 500 | 1,000 | |
| | (vii) | ಶೇಖರಣೆ ಮತ್ತು ಸೇವಾ ಪ್ರದೇಶ 500 ಚ.ಅಡಿ ಕಡಿಮೆ ಇರುವ ಚಿಲ್ಲರೆ ಅಂಗಡಿಗಳು | 250 | 500 | |
| 2 | ಅಡಿಗೆ/ಅಡಿಗಯೇತರ ಎಣ್ಣೆ ಶೇಖರಣೆ, ಪ್ಯಾಕಿಂಗ್, ಪ್ರಸಿಂಗ್, ಸ್ವಚ್ಛಗೊಳಿಸುವುದು, ತಯಾರಿಸುವುದು ಅಥವಾ ಉತ್ಪಾದಿಸುವುದು | | | | |
| | (i) | ಅಡಿಗೆ / ಅಡಿಗಯೇತರ ಎಣ್ಣೆ ಮಿಲ್ ಗಳು ಉತ್ಪಾದನೆ / ಸಂಸ್ಕರಣೆ | 5,000 | 10,000 | |
| | (ii) | ಅಡಿಗೆ / ಅಡಿಗೆಯೇತರ ಎಣ್ಣೆ ದಾಸ್ತಾನುಗಾರರು/ಸಗಟು ವ್ಯಾಪಾರ | 3,000 | 5,000 | |
| | (iii) | ಅಡಿಗೆ / ಅಡಿಗೆಯೇತರ ಎಣ್ಣೆಗಳ ಚಿಲ್ಲರೆ ಮಾರಾಟ (ಪ್ರತ್ಯೇಕ) | 2,000 | 3,000 | |
| | (iv) | ಉತ್ಪಾದನೆ/ಉದ್ದರಣೆ, ಮಾರಾಟಕ್ಕೆ ಶೇಖರಣೆ ಹೊರತಾಗಿ ಇತರ ಎಲ್ಲಾ ಎಣ್ಣೆಗಳು | 1,000 | 2,000 | |
| 3 | ಸಾಂಬಾರ ಪದಾರ್ಥಗಳು, ಕಾಂಡಿಮೆಂಟ್ ಶೇಖರಣೆ, ಪ್ಯಾಕಿಂಗ್, ಪ್ರಸಿಂಗ್ ಸ್ವಚ್ಛಗೊಳಿಸುವಿಕೆ, ಸಿದ್ದಪಡಿಸುವುದು ಅಥವಾ ಉತ್ಪಾದಿಸುವುದು ಅಥವಾ ಮಾರಾಟ (ದಿನಸಿ ಅಂಗಡಿ) ಸೇರಿದಂತೆ ಎಲ್ಲಾ ಆಹಾರ ಪದಾರ್ಥಗಳು | | | | |
| | (i) | ಸಗಟು ಶೇಖರಣೆ ಮತ್ತು ಮಾರಾಟ | | 100,000 | ಹೊಸ ಅನುಸೂಚಿ |
| | (ii) | ಸೂಪರ್ ಮಾರ್ಕೆಟ್ ಮಾಲ್‌ಗಳಲ್ಲಿ | | 50,000 | ಹೊಸ ಅನುಸೂಚಿ |
| | (iii) | ತಿನ್ನಲು ಸಿದ್ದ ಆಹಾರ ಅಥವಾ ಸಂಸ್ಕರಿಸಿದ ಆಹಾರ ತಯಾರಕರು (ಹವಾನಿಯಂತ್ರಿತ ಮಳಿಗೆಗಳು) | 20,000 | 40,000 | |
| | (iv) | ತಿನ್ನಲು ಸಿದ್ದ ಆಹಾರ ಅಥವಾ ಸಂಸ್ಕರಿಸಿದ ಆಹಾರ ತಯಾರಕರು (ಹವಾನಿಯಂತ್ರಿತ ವಲ್ಲದ ಮಳಿಗೆಗಳು) | | 25,000 | ಹೊಸ ಅನುಸೂಚಿ |
| | (v) | ಸೂಪರ್ ಮಾರ್ಕೆಟ್ (ಸ್ವ-ಸೇವೆ ಮಳಿಗೆಗಳು) | 10,000 | 20,000 | |
| | (vi) | ಶೇಖರಣೆ ಮತ್ತು ಸೇವಾ ಪ್ರದೇಶ 2000 ಚ.ಅಡಿ ಮೀರುವ ಚಿಲ್ಲರೆ ಅಂಗಡಿಗಳು | 5,000 | 10,000 | |
| | (vii) | ಶೇಖರಣೆ ಮತ್ತು ಸೇವಾ ಪ್ರದೇಶ 1000 ಚ.ಅ.ಗಿಂತ ಹೆಚ್ಚಾಗಿರುವ ಆದರೆ 2000 ಚ.ಅಡಿ ಒಳಗಿರುವ ಅಂಗಡಿಗಳು | 3,000 | 4,000 | |
| | (viii) | ಶೇಖರಣೆ ಮತ್ತು ಸೇವಾ ಪ್ರದೇಶ 500 ಚ.ಅ.ಗಳಿಗಿಂತ ಹೆಚ್ಚಿರುವ ಆದರೆ 100 ಚ.ಅ.ಗಿಂತ ಕಡಿಮೆ ಇರುವ | 1,000 | 2,000 | |
| | (ix) | ಶೇಖರಣೆ ಮತ್ತು ಸೇವಾ ಪ್ರದೇಶ 100 ಚ.ಅಡಿ ಮೀರದ ಚಿಲ್ಲರೆ ಅಂಗಡಿಗಳು | 500 | 1000 | |
| 4 | ತುಪ್ಪದ ತಯಾರಿಕೆ ಮತ್ತು ಪ್ಯಾಕಿಂಗ್ | | | | |
| | (i) | ಕಾರ್ಖಾನೆ ಕಾಯಿದೆಯಡಿ ತುಪ್ಪದ ತಯಾರಿಕೆ | 10,000 | 20,000 | |
| | (ii) | ಇತರೆ ಮನೆ ತಯಾರಿಕೆ ಪದಾರ್ಥಗಳು | 1,000 | 2,000 | |
| | (iii) | ಶೇಖರಣೆ ಮತ್ತು ಸೇವಾ ಪ್ರದೇಶ 1000 ಚ.ಅ.ಮೀರುವ ಚಿಲ್ಲರೆ ಅಂಗಡಿಗಳು | 1,000 | 2,000 | |
| | (iv) | ಶೇಖರಣೆ ಮತ್ತು ಸೇವಾ ಪ್ರದೇಶ 1000 ಚ.ಅ.ಗಿಂತ ಕಡಿಮೆ ಇರುವ ಚಿಲ್ಲರೆ ಅಂಗಡಿಗಳು | 500 | 500 | |
| 5 | ಆಹಾರ ಪದಾರ್ಥ, ಪಾನೀಯಗಳು ಅಥವಾ ಮದ್ಯಸೇವೆ ಸಲ್ಲಿಸುವ/ಮಾರಾಟ ಮಾಡುವ/ಶೇಖರಿಸುವ ಹೋಟೆಲ್ಲುಗಳು, ರೆಸ್ಟೋರೆಂಟ್‌ಗಳು ಮತ್ತು ಎಲ್ಲಾ ಅಂಗಡಿಗಳು | | | | |
| | (i) | ಎಲ್ಲಾ ತಾರಾ ಹೋಟೆಲ್‌ಗಳು 7 ಸ್ಟಾರ್ | 100,000 | 300,000 | |
| | (ii) | ಎಲ್ಲಾ ತಾರಾ ಹೋಟೆಲ್‌ಗಳು 5 ಸ್ಟಾರ್ | 100,000 | 250,000 | |
| | (iii) | ಎಲ್ಲಾ ತಾರಾ ಹೋಟೆಲ್‌ಗಳು 3 ಸ್ಟಾರ್ | 100,000 | 200,000 | |
| | (iv) | ರಿಕ್ರೀಯೇಷನ್ ಕ್ಲಬ್ ಬಾರ್ ಮತ್ತು ಕ್ರೀಡಾ ಚಟುವಟಿಕೆ ಹೊಂದಿರುವಂತವು | | 100,000 | |
| | (v) | ರಿಕ್ರೀಯೇಷನ್ ಕ್ಲಬ್ ಬಾರ್ ಮತ್ತು ಕ್ರೀಡಾ ಚಟುವಟಿಕೆ ಹೊಂದಿಲ್ಲದೇ ಇರುವುದು | | 25,000 | |
| | (vi) | ಬಾರ್ ಹೊಂದಿರುವ ಹವಾನಿಯಂತ್ರಿತ ಹೋಟೆಲ್‌ಗಳು 2000 ಚ.ಅ.ಮೀರುವ ಉದ್ದಿಮೆ | 25,000 | 50,000 | |
| | (vii) | ಬಾರ್ ಹೊಂದಿರುವ ಹವಾನಿಯಂತ್ರಿತ ಹೋಟೆಲ್‌ಗಳು 1000 ರಿಂದ 2000 ಚ.ಅ. ವರೆಗಿನ ಉದ್ದಿಮೆ | 25,000 | 40,000 | |
| | (viii) | ಬಾರ್ ಹೊಂದಿರುವ ಹವಾನಿಯಂತ್ರಿತ ಹೋಟೆಲ್‌ಗಳು 1000 ಚ.ಅ. ಕಡಿಮೆ ಇರುವ ಉದ್ದಿಮೆ | 25,000 | 35,000 | |
| | (ix) | ಬಾರ್ ಹೊಂದಿರುವ ಹವಾನಿಯಂತ್ರಿತವಲ್ಲದ ಹೋಟೆಲ್‌ಗಳು | 15,000 | 25,000 | |
| | (x) | ಬಾರ್‌ನಲ್ಲಿ ಅಡಿಗೆ ಮನೆ ಇಲ್ಲದೇ ಕೇವಲ ಸ್ನಾಕ್ಸ್ ಸರಬರಾಜು ಮಾಡುವ ಹೋಟೆಲ್‌ಗಳು | 15,000 | 15,000 | |

| | | | | | |
|---|---|---|---|---|---|
| | (xi) | ಹವಾನಿಯಂತ್ರಿತ ಹೋಟೆಲ್‌ಗಳು 2000 ಚ.ಅ.ಮೀರುವ ಉದ್ದಿಮೆ | 10,000 | 25,000 | |
| | (xii) | ಹವಾನಿಯಂತ್ರಿತ ಹೋಟೆಲ್‌ಗಳು 1000 ರಿಂದ 2000 ಚ.ಅ. ವರೆಗಿನ ಉದ್ದಿಮೆ | 10,000 | 20,000 | |
| | (xiii) | 'ಹವಾನಿಯಂತ್ರಿತ ಹೋಟೆಲ್‌ಗಳು 1000 ಚ.ಅ. ಕಡಿಮೆ ಇರುವ ಉದ್ದಿಮೆ | 10,000 | 15,000 | |
| | (xiv) | ಹವಾನಿಯಂತ್ರಿತವಲ್ಲದ ಹೋಟೆಲ್‌ಗಳು | 5,000 | 10,000 | |
| | (xv) | ದರ್ಶಿನಿ ಮಾದರಿ ಹೋಟೆಲ್‌ಗಳು | 3,000 | 5,000 | |
| | (xvi) | ಕಾರ್ಖಾನೆಗಳಲ್ಲಿ, ನರ್ಸಿಂಗ್ ಹೋಮ್‌ಗಳಲ್ಲಿ ಮತ್ತು ಚಿತ್ರಮಂದಿರಗಳಲ್ಲಿರುವ ಕ್ಯಾಂಟಿನ್‌ಗಳು | 2,000 | 4,000 | |
| | (xvii) | 200 ಚ.ಅ.ಗಿಂತ ಕಡಿಮೆ ಇರುವ ಸಣ್ಣ ಕಾಫಿ ಟೀ ಸ್ಟಾಲ್‌ಗಳು | 1,000 | 2,000 | |
| | (xviii) | 200 ಚ.ಅ.ಗಿಂತ ಹೆಚ್ಚಾಗಿರುವ ಊಟ ಮಾಡುವ ಮೆಸ್ | 1,000 | 2,000 | |
| | (xix) | 200 ಚ.ಅ.ಗಿಂತ ಕಡಿಮೆ ಇರುವ ಊಟ ಮಾಡುವ ಮೆಸ್ | 500 | 1,000 | |
| | (xx) | ಪಾನಿಪೂರಿ & ಚಾಟ್ಸ್ ಉದ್ದಿಮೆ | | 1,000 | |
| 6 | ಪ್ಯಾಕ್ ಮಾಡಲಾದ ಆಹಾರ ಪದಾರ್ಥಗಳು | | | | |
| | (i) | ಕಾರ್ಖಾನೆ ಕಾಯಿದೆಯಡಿ ಉದ್ದಿಮೆಯಿಂದ ಮಾರಾಟ ಮಾಡಲು ಜ್ಯಾಮ್ ತಯಾರಿಕೆ, ಪ್ಯಾಕಿಂಗ್ ಮತ್ತು ಶೇಖರಣೆ | 10,000 | 20,000 | |
| | (ii) | ಮನೆಯಲ್ಲಿ ತಯಾರಿಸಲ್ಪಡುವ ಜ್ಯಾಮ್ ತಯಾರಿಕೆ, ಪ್ಯಾಕಿಂಗ್ ಮತ್ತು ಶೇಖರಣೆ | 1,000 | 2,000 | |
| | (iii) | ಕಾರ್ಖಾನೆ ಕಾಯಿದೆಯಡಿ ಉಪ್ಪಿನಕಾಯಿ, ಹಪ್ಪಳ, ಕಾಂಡಿಮೆಂಟ್ಸ್ ತಯಾರಿಕೆ, ಪ್ಯಾಕಿಂಗ್ ಶೇಖರಣೆ | 10,000 | 20,000 | |
| | (iv) | ಗೃಹ ಕೈಗಾರಿಕೆಯ ಉಪ್ಪಿನಕಾಯಿ, ಹಪ್ಪಳ, ಕಾಂಡಿಮೆಂಟ್ಸ್ ತಯಾರಿಕೆ, ಪ್ಯಾಕಿಂಗ್ ಶೇಖರಣೆ | 5,000 | 7,500 | |
| 7 | ಹಾಲು ಮತ್ತು ಹಾಲು ಉತ್ಪನ್ನಗಳ ಶೇಖರಣೆ ಮತ್ತು ಮಾರಾಟ | | | | |
| | (i) | ಕಾರ್ಖಾನೆ ಕಾಯಿದೆಯಡಿ ಹಾಲು ಡೈರಿ | 10,000 | 20,000 | |
| | (ii) | ಇತರ ಹಾಲು ಡೈರಿ | 1,000 | 2,000 | |
| | (iii) | 100 ಚ.ಅ.ಗಿಂತ ಕಡಿಮೆ ಇರುವ ಹಾಲಿನ ಚಿಲ್ಲರೆ ಮಾರಾಟದ ಕೌಂಟರ್‌ಗಳು | 250 | 500 | |
| | (iv) | 100 ಚ.ಅ.ಗಿಂತ ಹೆಚ್ಚಾಗಿರುವ ಹಾಲಿನ ಚಿಲ್ಲರೆ ಮಾರಾಟದ ಕೌಂಟರ್‌ಗಳು | 500 | 1000 | |
| 8 | ಮಾಂಸ, ಕೋಳಿ, ಮೀನು, ಹಂದಿ ಮಾಂಸ, ಹಸು ಮಾಂಸ | | | | |
| | (i) | ಶೈತ್ಯಾಗರದಲ್ಲಿರಿಸಿದ ಎಲ್ಲಾ ರೀತಿಯ ಮಾಂಸ | 5,000 | 10,000 | |
| | (ii) | ತಾಜಾ ಕತ್ತರಿಸಿ ಮಾರಾಟ ಮಾಡುವ ಎಲ್ಲಾ ರೀತಿಯ ಮಾಂಸ | 1,000 | 2,000 | |
| 9 | ಅನಿಲಗೂಡಿಸಿದ ಪಾನೀಯ(ಸೋಡಾ), ಲಘು ಪಾನೀಯಗಳು ಹಾಗೂ ಬಾಟಲ್ ನೀರು | | | | |
| | (i) | ಬಾಟಲ್‌ಗಳಲ್ಲಿ, ಧಾರಕಗಳಲ್ಲಿ ಮತ್ತು ಇತರೆ ರೂಪದಲ್ಲಿ ಮಾರಲಾಗುವ ಅನಿಲಗೂಡಿದ ಪಾನೀಯ ಹಾಗೂ ಲಘು ಪಾನೀಯಗಳ ತಯಾರಿಕೆ | 100,000 | 150,000 | |
| | (ii) | ಬಾಟಲ್‌ಗಳಲ್ಲಿ, ಧಾರಕಗಳಲ್ಲಿ ಮತ್ತು ಇತರೆ ರೂಪದಲ್ಲಿ ಮಾರಲಾಗುವ ಅನಿಲಗೂಡಿದ ಅಥವಾ ಅಲ್ಲದ ಎಲ್ಲಾ ರೀತಿಯ ಹಣ್ಣಿನ ಪೇಯುಗಳ ತಯಾರಿಕೆ | 100,000 | 150,000 | |
| | (iii) | ಕಾರ್ಖಾನೆ ಕಾಯಿದೆಯಡಿ ಮತ್ತು ವಿದ್ಯುತ್ ಬಳಸಿ ತಯಾರಿಸಲಾಗುವ ಅನಿಲಗೂಡಿದ ನೀರು(ಸೋಡಾ) ಮಾತ್ರ | 5,000 | 10,000 | |
| | (iv) | ಬಾಟಲೀಕರಿಸಿದ ನೀರಿನ (ಖನಿಜಯುಕ್ತ ನೀರು) ತಯಾರಿಕೆ/ಸಂಸ್ಕರಣೆ | 25,000 | 50,000 | |
| | (v) | ಅನಿಲಗೂಡಿದ ನೀರು, ಲಘು ಪಾನೀಯಗಳು ಮತ್ತು ಬಾಟಲ್ ನೀರಿನ ಸಗಟು ವ್ಯಾಪಾರಕ್ಕೆ ದಾಸ್ತಾನುದಾರರು ಅಥವಾ ಅ ಮತ್ತು ಎಫ್ ಏಜೆಂಟ್ | 10,000 | 20,000 | |
| | (vi) | ಅನಿಲಗೂಡಿದ ನೀರು, ಲಘು ಪಾನೀಯಗಳು ಮತ್ತು ಬಾಟಲ್ ನೀರಿನ ಸಗಟು ವ್ಯಾಪಾರಕ್ಕೆ ಶೇಖರಣೆ ಮತ್ತು ಮಾರಾಟ | 10,000 | 20,000 | |
| | (vii) | 2000 ಚ.ಅ.ಗಿಂತ ಹೆಚ್ಚಿನ ಶೇಖರಣೆ ಮತ್ತು ಸೇವೆ ಪ್ರದೇಶ ಹೊಂದಿದ ಚಿಲ್ಲರೆ ಮಾರಾಟ | 5,000 | 10,000 | |
| | (viii) | 1000 ಚ.ಅ.ಗಿಂತ ಹೆಚ್ಚಿನ ಆದರೆ 500 ಚ.ಅ.ಗಿಂತ ಕಡಿಮೆ ಇರುವ ಶೇಖರಣೆ ಮತ್ತು ಸೇವೆ ಪ್ರದೇಶ ಹೊಂದಿದ ಚಿಲ್ಲರೆ | 2,000 | 4,000 | |
| | (ix) | 500 ಚ.ಅ.ಗಿಂತ ಕಡಿಮೆ ಶೇಖರಣೆ ಮತ್ತು ಸೇವೆ ಪ್ರದೇಶ ಹೊಂದಿದ ಚಿಲ್ಲರೆ ಮಾರಾಟ | 1,000 | 2,000 | |
| | (x) | 2000 ಚ.ಅ.ಗಿಂತ ಹೆಚ್ಚಿನ ಶೇಖರಣೆ ಮತ್ತು ಸೇವೆ ಪ್ರದೇಶ ಹೊಂದಿದ ಫ್ರೆಷ್ ಜ್ಯೂಸ್ ಸೆಂಟರ್ | | 5,000 | ಹೊಸ ಅನುಸೂಚಿ |
| | (xi) | 1000 ಚ.ಅ.ಗಿಂತ ಹೆಚ್ಚಿನ ಆದರೆ 500 ಚ.ಅ.ಗಿಂತ ಕಡಿಮೆ ಇರುವ ಶೇಖರಣೆ ಮತ್ತು ಸೇವೆ ಪ್ರದೇಶ ಹೊಂದಿದ ಫ್ರೆಷ್ ಜ್ಯೂಸ್ ಸೆಂಟರ್ | | 3,000 | ಹೊಸ ಅನುಸೂಚಿ |

| | | | | | |
|---|---|---|---|---|---|
| | (xii) | 500 ಚ.ಅ.ಗಿಂತ ಕಡಿಮೆ ಶೇಖರಣೆ ಮತ್ತು ಸೇವೆ ಪ್ರದೇಶ ಹೊಂದಿದ ಫ್ರೆಷ್ ಜ್ಯೂಸ್ ಸೆಚಟರ್ | | 1,500 | ಹೊಸ ಅನುಸೂಚಿ |
| 10 | | ಮದ್ಯ ಮತ್ತು ಮದ್ಯಸಾರ (ಸ್ಪಿರಿಟ್) | | | |
| | (i) | ಕೈಗಾರಿಕಾ ಆಲ್ಕೋಹಾಲ್ ತಯಾರಿಕೆ | 100,000 | 200,000 | |
| | (ii) | ಮಾನವ ಸೇವನೆಗೆ ಬೀರ್ ತಯಾರಿಕೆ ಸೇರಿದಂತೆ ಎಲ್ಲಾ ರೀತಿಯ ಮದ್ಯ ತಯಾರಿಕೆ | 200,000 | 400,000 | |
| | (iii) | ಆಲ್ಕೋಹಾಲ್ ಸಗಟು ದಾಸ್ತಾನುದಾರರು | 25,000 | 50,000 | |
| | (iv) | ವೈನ್ ಸ್ಟೋರ್, ಆಲ್ಕೋಹಾಲ್‌ನ ಚಿಲ್ಲರೆ ಮಾರಾಟ | 5,000 | 10,000 | |
| 11 | | ಟೀ | | | |
| | (i) | ಮಿಶ್ರಣ ಮತ್ತು ಸಂಸ್ಕರಣೆ ಕಾರ್ಖಾನೆ | 10,000 | 15,000 | |
| | (ii) | ಚಿಲ್ಲರೆ ಟೀ ಶೇಖರಣೆ ಮತ್ತು ಮಾರಾಟ | 5,000 | 5,000 | |
| 12 | ಐಸ್, ಐಸ್ ಕ್ರೀಂ ಮತ್ತು ಐಸ್ ಕ್ಯಾಂಡಿ | | | | |
| | (i) | ಐಸ್ ಕ್ರೀಂ | 5,000 | 7,500 | |
| | (ii) | ಐಸ್ ಮತ್ತು ಐಸ್ ಕ್ಯಾಂಡಿ ತಯಾರಕರು | 3,000 | 5,000 | |
| | (iii) | ಚಿಲ್ಲರೆ ಮಾರಾಟ | 1,000 | 2,000 | |
| | | ಭಾಗ ಸಂಖ್ಯೆ:- 2 | | | |
| 1 | ಯಾವುದೇ ಆಹಾರ ಅಥವಾ ಪಾನೀಯ ಸೇವನೆ ಜೊತೆಗೆ ಅಥವಾ ಅವುಗಳಿಲ್ಲದೆ ಸಾರ್ವಜನಿಕರಿಗೆ ತಂಗಲು ಅನುಮತಿಸುವ ಬೋರ್ಡಿಂಗ್ ಮತ್ತು ಲಾಡ್ಜಿಂಗ್ | | | | |
| | (ಎ) | ಬೋರ್ಡಿಂಗ್ ಮತ್ತು ಲಾಡ್ಜಿಂಗ್ | | | |
| | (i) | 50 ಕೋಣೆಗಳಿಗೆ ಹೆಚ್ಚು | 25,000 | 50,000 | |
| | (ii) | 20 ಕೋಣೆಗಳಿಗಿಂತ ಹೆಚ್ಚು, ಆದರೆ 50 ಕೋಣೆಗಳಿಗಿಂತ ಕಡಿಮೆ | 15,000 | 30,000 | |
| | (iii) | 20 ಕೋಣೆಗಳಿಗಿಂತ ಕಡಿಮೆ | 5,000 | 10,000 | |
| | (ಬಿ) | ಲಾಡ್ಜಿಂಗ್ ಮಾತ್ರ | | | |
| | (i) | 50 ಕೋಣೆಗಳಿಗೆ ಹೆಚ್ಚು | 15,000 | 30,000 | |
| | (ii) | 20 ಕೋಣೆಗಳಿಗಿಂತ ಹೆಚ್ಚು, ಆದರೆ 50 ಕೋಣೆಗಳಿಗಿಂತ ಕಡಿಮೆ | 7,500 | 15,000 | |
| | (iii) | 20 ಕೋಣೆಗಳಿಗಿಂತ ಕಡಿಮೆ | 5,000 | 10,000 | |
| | (ಸಿ) | ಸೇವಾ ಅಪಾರ್ಟ್‌ಮೆಂಟ್‌ಗಳು ಮತ್ತು ಅಂಥವು | | | |
| | (i) | 50 ಕೋಣೆಗಳಿಗಿಂತ ಹೆಚ್ಚು | 10,000 | 25,000 | |
| | (ii) | 10 ಕೋಣೆಯಿಂದ 50 ಕೋಣೆಗಳಿಗೆ | 10,000 | 20,000 | |
| | (iii) | 10 ಕೋಣೆಗಳಿಗಿಂತ ಕಡಿಮೆ | 5,000 | 10,000 | |
| | (ಡಿ) | ಆಹಾರದೊಂದಿಗೆ ಅಥವಾ ಅದಿಲ್ಲದೆ ಪೇಯಿಂಗ್ ಗೇಸ್ಟ್/ಅತಿಥಿ ಗೃಹ ಮತ್ತು 50 ಕೋಣೆಗಳಿಗಿಂತ ಹೆಚ್ಚು ಅಂಥವು | 3,000 | 10,000 | ಹೊಸ ಅನುಸೂಚಿ |
| | | ಆಹಾರದೊಂದಿಗೆ ಅಥವಾ ಅದಿಲ್ಲದೆ ಪೇಯಿಂಗ್ ಗೇಸ್ಟ್/ಅತಿಥಿ ಗೃಹ ಮತ್ತು 20 ಕೋಣೆಗಳಿಗಿಂತ ಹೆಚ್ಚು, ಆದರೆ 50 ಕೋಣೆಗಳಿಗಿಂತ ಕಡಿಮೆ ಅಂಥವು | 3,000 | 6,000 | ಹೊಸ ಅನುಸೂಚಿ |
| | | ಆಹಾರದೊಂದಿಗೆ ಅಥವಾ ಅದಿಲ್ಲದೆ ಪೇಯಿಂಗ್ ಗೇಸ್ಟ್/ಅತಿಥಿ ಗೃಹ ಮತ್ತು 20 ಕೋಣೆಗಳಿಗಿಂತ ಕಡಿಮೆ ಅಂಥವು | 3,000 | 4,000 | |
| | (ಇ) | ಊಟದ ಸೇವನೆಯಿರುವ ಅಥವಾ ಇಲ್ಲದಿರುವ ವಿದ್ಯಾರ್ಥಿ ಮತ್ತು ಕ್ರೀಡಾ ಹಾಸ್ಟಲ್‌ಗಳು | 1,000 | 2,000 | |
| 2 | (ಎ) ಛತ್ರಗಳು, ಮದುವೆ ಮಂಟಪಗಳು, ಸಮಾವೇಶ ಕೇಂದ್ರ | | | | |
| | (i) | ಒಟ್ಟು 15000 ಚ.ಅ ಗಿಂತ ಹೆಚ್ಚು. ನಿರ್ಮಿಸಲ್ಪಟ್ಟ ಪ್ರದೇಶ | 30,000 | 60,000 | |
| | (ii) | ಒಟ್ಟು ನಿರ್ಮಿಸಲ್ಪಟ್ಟ ಪ್ರದೇಶ 15000 ಚ.ಅ.ಗಿಂತ ಹೆಚ್ಚು, ಆದರೆ 10000 ಚ.ಅ.ಗಿಂತ ಕಡಿಮೆ | 20,000 | 40,000 | |
| | (iii) | ನಿರ್ಮಿಸಲ್ಪಟ್ಟ ಪ್ರದೇಶ ಒಟ್ಟು 10000 ಚ.ಅ.ಗಿಂತ ಕಡಿಮೆ | 15,000 | 30,000 | |
| | (ಬಿ) | ಸಮುದಾಯ ಭವನಗಳು, ಪಾರ್ಟಿ ಹಾಲ್ ಮತ್ತು ಅಂಥವು | | | |
| | (i) | ಒಟ್ಟು ನಿರ್ಮಿಸಲ್ಪಟ್ಟ ಪ್ರದೇಶ 2000 ಚ.ಅ.ಗಿಂತ ಹೆಚ್ಚು | 10,000 | 20,000 | |
| | (ii) | ಒಟ್ಟು ನಿರ್ಮಿಸಲ್ಪಟ್ಟ ಪ್ರದೇಶ 1000 ಚ.ಅ.ಗಿಂತ ಹೆಚ್ಚು, ಆದರೆ 2000 ಚ.ಅ.ಗಿಂತ ಕಡಿಮೆ | 5,000 | 10,000 | |
| | | ಭಾಗ ಸಂಖ್ಯೆ:-3 | | | |

| | | | | | |
|---|---|---|---|---|---|
| | ಆಹಾರೇತರ ಪದಾರ್ಥಗಳು – ವೈದ್ಯಕೀಯ | | | | |
| 1 | ರಕ್ತ ಶೇಖರಣೆ, ಪ್ಯಾಕಿಂಗ್, ಸಂಸ್ಕರಣೆ ಇತ್ಯಾದಿ | | 10,000 | 20,000 | |
| 2 | ಹುರಿ, ಕೊಬ್ಬು, ಮೂಳೆ, ಗಟ್ಟಿಚರುಬು, ಮಾಂಸ, ಮೀನು ಎಣ್ಣೆ ಮತ್ತು ಅಂಥವು | | 1,000 | 2,000 | |
| 3 | ನರ್ಸಿಂಗ್ ಹೋಮ್ ಮತ್ತು ಆಸ್ಪತ್ರೆ | | | | |
| | (i) | 200 ಹಾಸಿಗೆಗಿಂತ ಹೆಚ್ಚು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ/ಎನ್.ಎ.ಬಿ.ಹೆಚ್. | 10,000 | 40,000 | ಹೊಸ ಅನುಸೂಚಿ |
| | (ii) | 200 ಹಾಸಿಗೆಗಳಿಗಿಂತ ಹೆಚ್ಚು, ಇತರೆ ಆಸ್ಪತ್ರೆಗಳು | 10,000 | 20,000 | |
| | (iii) | 100 ಹಾಸಿಗೆಗಿಂತ ಹೆಚ್ಚು 200 ಹಾಸಿಗೆಗಳಿಗಿಂದ ಕಡಿಮೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ/ಎನ್.ಎ.ಬಿ.ಹೆಚ್. | 5,000 | 20,000 | ಹೊಸ ಅನುಸೂಚಿ |
| | (iv) | 100 ಹಾಸಿಗೆಗಳಿಗಿಂತ ಹೆಚ್ಚು, ಆದರೆ 200 ಹಾಸಿಗೆಗಳಿಗಿಂತ ಕಡಿಮೆ ಇತರೆ ಆಸ್ಪತ್ರೆ | 5,000 | 10,000 | |
| | (v) | 50 ಹಾಸಿಗೆಗಿಂತ ಹೆಚ್ಚು 100 ಹಾಸಿಗೆಗಳಿಗಿಂದ ಕಡಿಮೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ/ಎನ್.ಎ.ಬಿ.ಹೆಚ್. | 3,000 | 10,000 | ಹೊಸ ಅನುಸೂಚಿ |
| | (vi) | 50 ಹಾಸಿಗೆಗಳಿಗಿಂತ ಹೆಚ್ಚು, ಆದರೆ 100 ಹಾಸಿಗೆಗಳಿಗಿಂತ ಕಡಿಮೆ ಇತರೆ ಆಸ್ಪತ್ರೆ | 3,000 | 6,000 | |
| | (vii) | 50 ಹಾಸಿಗೆಗಳಿಗಿಂತ ಕಡಿಮೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ/ಎನ್.ಎ.ಬಿ.ಹೆಚ್. | 2,000 | 6,000 | ಹೊಸ ಅನುಸೂಚಿ |
| | (viii) | 50 ಹಾಸಿಗೆಗಳಿಗಿಂತ ಕಡಿಮೆ ಇತರೆ ಆಸ್ಪತ್ರೆ | 2,000 | 4,000 | |
| 4 | (i) | ಪಾಲಿ ಕ್ಲಿನಿಕ್, ತಜ್ಞರ ಕ್ಲಿನಿಕ್ (**Specialist**) | | 5,000 | ಹೊಸ ಅನುಸೂಚಿ |
| | (ii) | ಕ್ಲಿನಿಕ್ಸ್/ಡೇ ಕೇರ್ ಯುನಿಟ್ಸ್ | | 2,000 | ಹೊಸ ಅನುಸೂಚಿ |
| | (ಸಿ) ಡೆಂಟಲ್ ಕ್ಲೀನಿಕ್ | | | | |
| | (i) | ಡೆಂಟಲ್ ಕ್ಲೀನಿಕ್ (2 ದಂತ ಚಿಕಿತ್ಸಾ ಚೇರ್‌ಗಿಂತ ಹೆಚ್ಚು) | | 5,000 | ಹೊಸ ಅನುಸೂಚಿ |
| | (ii) | ಡೆಂಟಲ್ ಕ್ಲೀನಿಕ್ (2 ದಂತ ಚಿಕಿತ್ಸಾ ಚೇರ್‌ಗಿಂತ ಕಡಿಮೆ) | | 2,000 | ಹೊಸ ಅನುಸೂಚಿ |
| 5 | ಲ್ಯಾಬೊರೇಟರಿ(ರೋಗ ತಪಾಸಣಾ ಪ್ರಯೋಗಾಲಯ | | | | |
| | (i) | 1000 ಚ.ಅಡಿ ಗಿಂತ ಹೆಚ್ಚು | 2,000 | 5,000 | |
| | (ii) | 500 ಚ.ಅಡಿ ಗಿಂತ ಹೆಚ್ಚು | 2,000 | 4,000 | |
| | (iii) | 500 ಚ.ಅಡಿ ಗಿಂತ ಕಡಿಮೆ | 2,000 | 3,000 | |
| 6 | (i) | ರೋಗಲಕ್ಷಣ ಪತ್ತೆಹಚ್ಚುವ ಪ್ರಯೋಗಾಲಯಗಳು (ಎಂ.ಆರ್.ಐ, ಸಿ.ಟಿ, ಆಲ್ಟ್ರಾ ಸೌಂಡ್ ಸ್ಕ್ಯಾನ್) ಇತ್ಯಾದಿ ಸೌಲಭ್ಯವಿರುವುದು | 2,000 | 10,000 | |
| | (ii) | ರೋಗಲಕ್ಷಣ ಪತ್ತೆಹಚ್ಚುವ ಪ್ರಯೋಗಾಲಯಗಳು (ಎಂ.ಆರ್.ಐ, ಸಿ.ಟಿ, ಆಲ್ಟ್ರಾ ಸೌಂಡ್ ಸ್ಕ್ಯಾನ್) ಇತ್ಯಾದಿ ಸೌಲಭ್ಯ ವಿಲ್ಲದಿರುವುದು | 2,000 | 5,000 | |
| | (iii) | ಹೆಲ್ತ್ ಕ್ಲಬ್ (ಜಿಮ್, ಸ್ಪಾ, ಎರೋಬಿಕ್ಸ್, ಮಸಾಜ್) & ಫಿಟ್‌ನೆಸ್ ಯುನಿಟ್ಸ್, | 2,000 | 10,000 | |
| 7 | ಕ್ಷೌರಿಕ ಅಂಗಡಿ, | | | | |
| | (i) | ಹವಾನಿಯಂತ್ರಿತ ಯುನಿವರ್ಸಲ್ 300 ಚ.ಅ.ಗಿಂತ ಹೆಚ್ಚು, | 3,000 | 5,000 | |
| | (ii) | ಹವಾನಿಯಂತ್ರಿತ ಯುನಿವರ್ಸಲ್ 300 ಚ.ಅ.ಗಿಂತ ಕಡಿಮೆ | 500 | 1,000 | |
| | (iii) | ಹವಾನಿಯಂತ್ರಿತವಲ್ಲದ ಯುನಿವರ್ಸಲ್ 300 ಚ.ಅ.ಗಿಂತ ಹೆಚ್ಚು, | 3,000 | 5,000 | |
| | (iv) | ಹವಾನಿಯಂತ್ರಿತವಲ್ಲದ ಯುನಿವರ್ಸಲ್ 300 ಚ.ಅ.ಗಿಂತ ಕಡಿಮೆ | 500 | 1,000 | |
| | (v) | ಗಂಡಸರ ಕ್ಷೌರಿಕ ಅಂಗಡಿ 300 ಚ.ಅ.ಗಿಂತ ಹೆಚ್ಚು, | 3,000 | 5,000 | |
| | (vi) | ಗಂಡಸರ ಕ್ಷೌರಿಕ ಅಂಗಡಿ 300 ಚ.ಅ.ಗಿಂತ ಕಡಿಮೆ | 500 | 1,000 | |
| | (vii) | ಬ್ಯೂಟಿ ಪಾರ್ಲರ್ 300 ಚ.ಅ.ಗಿಂತ ಹೆಚ್ಚು, | 3,000 | 5,000 | |
| | (viii) | ಬ್ಯೂಟಿ ಪಾರ್ಲರ್ 300 ಚ.ಅ.ಗಿಂತ ಕಡಿಮೆ | 500 | 1,000 | |
| | | ಭಾಗ ಸಂಖ್ಯೆ:–4 | | | |
| | ಆಹಾರೇತರ ವಸ್ತು – ಕೈಗಾರಿಕೆ | | | | |
| 1 | ಕಾರ್ಖಾನೆಗಳಲ್ಲಿ ಸಿದ್ದವಾಗುವ ಬೀಡಿಗಳು | | 2,000 | 5,000 | |
| 2 | ಆಟೋಮೊಬೈಲ್ ಬ್ಯಾಟರಿ ತಯಾರಿಕೆ ಮತ್ತು ಶೇಖರಣೆ | | 10,000 | 20,000 | |
| 3 | ಮದ್ದುಗುಂಡು ಮತ್ತು ಪಟಾಕಿ ತಯಾರಿಕೆ ಮತ್ತು ಶೇಖರಣೆ | | 10,000 | 20,000 | |
| 4 | (i) | ನಿರ್ಮಿಸಲ್ಪಟ್ಟ ಪ್ರದೇಶವು 200 ಚ.ಅಡಿ ಮೀರುವ ಬ್ಯಾಟರಿ ರೀ ಕಂಡೀಶನಿಂಗ್ ಮತ್ತು ಸೇವೆ | 1,000 | 2,000 | |
| | (ii) | ನಿರ್ಮಿಸಲ್ಪಟ್ಟ ಪ್ರದೇಶವು 200 ಚ.ಅಡಿಗಿಂತ ಕಡಿಮೆ ಇರುವ ಬ್ಯಾಟರಿ ರೀ ಕಂಡೀಶನಿಂಗ್ ಮತ್ತು ಸೇವೆ | 500 | 1000 | |
| 5 | ಮೇಣದಬತ್ತಿ ತಯಾರಿಕೆ, ಶೇಖರಣೆ ಅಥವಾ ಮಾರಾಟ | | 500 | 1000 | |
| 6 | ಕಾರ್ಪೆಟ್ ತಯಾರಿಕೆ | | 500 | 1000 | |

| | | | | | |
|---|---|---|---|---|---|
| 7 | ಕರ್ಪೂರ ತಯಾರಿಕೆ, ಸಿದ್ದಪಡಿಸುವುದು | | 500 | 1000 | |
| 8 | (i) | ಹತ್ತಿ, ಉಣ್ಣೆ, ಸೆಣಬು ಸಗಟು | 500 | 1000 | |
| | (ii) | ಹತ್ತಿ, ಉಣ್ಣೆ, ಸೆಣಬು ಚಿಲ್ಲರೆ | 500 | 1000 | |
| 9 | ಪಶು ಆಹಾರ | | | | |
| | (i) | ಕಾರ್ಖಾನೆ ಕಾಯಿದೆ ಅಡಿ | 2,000 | 5,000 | |
| | (ii) | ಇತರರು | 1,000 | 2,000 | |
| 10 | ಕಲ್ಲಿದ್ದಲು, ಸೌದೆ | | 500 | 1000 | |
| 11 | ಎಲ್ಲಾ ಬಗೆಯ ರಾಸಾಯನಿಕಗಳು ಹಾಗೂ ಕೀಟನಾಶಕಗಳ ತಯಾರಿಕೆ, ಮಿಶ್ರಣ, ಶೇಖರಣೆ, ಮಾರಾಟ | | | | |
| | (i) | 1 ರಿಂದ 25 ಕಾರ್ಮಿಕರು | 3,000 | 5,000 | |
| | (ii) | 26 ರಿಂದ 50 ಕಾರ್ಮಿಕರು | 5,000 | 10,000 | |
| | (iii) | ಸಗಟು ಶೇಖರಣೆ ಮತ್ತು ಮಾರಾಟ | 2,000 | 4,000 | |
| | (iv) | ಚಿಲ್ಲರೆ ಶೇಖರಣೆ ಮತ್ತು ಮಾರಾಟ | 1,000 | 2,000 | |
| 12 | ಡ್ರೈ ಕ್ಲೀನಿಂಗ್ ಮತ್ತು ಲಾಂಡ್ರಿ (ಬಟ್ಟೆಯೊಗೆತ) | | | | |
| | (i) | ಯಂತ್ರದಿಂದ ಬಟ್ಟೆಯೊಗೆತ | 1,000 | 2,000 | |
| | (ii) | ಕೈಗಳಿಂದ ಬಟ್ಟೆ ಒಗೆಯುವುದು | 500 | 1000 | |
| 13 | ಡೈಯಿಂಗ್ ಹಾಗೂ ಪ್ರಿಂಟಿಂಗ್ ಘಟಕಗಳು | | | | |
| | (i) | ಕಾರ್ಖಾನೆ ಕಾಯಿದೆಯಡಿ | 2000 | 4000 | |
| | (ii) | ಇತರರು | 1000 | 2000 | |
| 14 | ಎಲ್ಲಾ ಬಗೆಯ ಫೌಂಡರಿಗಳು | | | | |
| | (i) | 30 ಕಾರ್ಮಿಕರವರೆಗೆ | 500 | 1000 | |
| | (ii) | 30 ಕಾರ್ಮಿಕರಿಗಿಂತ ಮೇಲ್ಪಟ್ಟು | 1000 | 2000 | |
| 15 | ಫರ್ನೆಸ್ ಆಯಿಲ್, ಟ್ರಾನ್ಸ್ ಫಾರ್ಮರ್ ಆಯಿಲ್, ಲ್ಯೂಬ್ರಿಕೇಟಿಂಗ್ ಆಯಿಲ್, ಗ್ರೀಸ್ ಸಾಲ್ವೆಂಟ್, ಆಯಿಲ್ ಕೂಲಂಟ್ | | | | |
| | (i) | ತಯಾರಿಕೆ ಅಥವಾ ಸಂಸ್ಕರಣೆ | 5000 | 10000 | |
| | (ii) | ಶೇಖರಣೆ ಮತ್ತು ಮಾರಾಟಕ್ಕೆ 200 ಚ.ಅ.ಗಿಂತ ಹೆಚ್ಚಿರುವ ವಾಣಿಜ್ಯ ಸ್ಥಳ | 2000 | 5000 | |
| | (iii) | ಶೇಖರಣೆ ಮತ್ತು ಮಾರಾಟಕ್ಕೆ 200 ಚ.ಅ.ಗಿಂತ ಕಡಿಮೆ ಇರುವ ವಾಣಿಜ್ಯ ಸ್ಥಳ | 1000 | 2000 | |
| 16 | (i) | ಚಿನ್ನ ಮತ್ತು ಬೆಳ್ಳಿ ಪರಿಷ್ಕರಣೆಗೆ 200 ಚ.ಅ.ಗಿಂತ ಹೆಚ್ಚಿರುವ ವಾಣಿಜ್ಯ ಸ್ಥಳ | 1000 | 2000 | |
| | (ii) | ಚಿನ್ನ ಮತ್ತು ಬೆಳ್ಳಿ ಪರಿಷ್ಕರಣೆಗೆ 200 ಚ.ಅ.ಗಿಂತ ಕಡಿಮೆ ಇರುವ ವಾಣಿಜ್ಯ ಸ್ಥಳ | 500 | 1000 | |
| 17 | ಚಿಲ್ಲರೆ ವಿತರಣೆಗಾಗಿ ಅನಿಲ ಶೇಖರಣೆ, ತುಂಬುವುದು | | | | |
| | (i) | ಶೇಖರಣೆ ಪ್ರದೇಶ 5000 ರಿಂದ ಮೇಲ್ಪಟ್ಟು ಚ.ಅ.ಗಿಂತ ಹೆಚ್ಚು | 3,000 | 6,000 | |
| | (ii) | ಶೇಖರಣೆ ಪ್ರದೇಶ 500 ರಿಂದ 5000 ಚ.ಅ. ವರೆಗೆ | 3,000 | 5,000 | |
| | (iii) | ಶೇಖರಣೆ ಪ್ರದೇಶ 500 ಚ.ಅ.ಗಿಂತ ಕಡಿಮೆ | 2,000 | 4,000 | |
| 18 | ಸೀಗೆಕಾಯಿ ಸೇರಿದಂತೆ ಸಾಬೂನು, ಡಿಟರ್ಜೆಂಟ್ ಹಾಗೂ ಕ್ರಿಮಿನಾಶಕಗಳ ತಯಾರಿಕೆ, ಶೇಖರಣೆ ಮಾರಾಟ ಅಥವಾ ವಿತರಣೆ | | | | |
| | | ತಯಾರಿಕೆ ಮತ್ತು ದಾಸ್ತಾನು | 5,000 | 10,000 | |
| | (i) | 1000 ಚ.ಅ.ಗಿಂತ ಶೇಖರಣೆ ಸ್ಥಳ ಹೊಂದಿರುವ ದಾಸ್ತಾನುದಾರರು | 3,000 | 5,000 | |
| | (ii) | 1000 ಚ.ಅ.ಗಿಂತ ಕಡಿಮೆ ಶೇಖರಣೆ ಸ್ಥಳ ಹೊಂದಿರುವ ದಾಸ್ತಾನುದಾರರು | 2,000 | 3,000 | |
| | (iii) | 500 ಚ.ಅ.ಗಿಂತ ಹೆಚ್ಚಿರುವ ಚಿಲ್ಲರೆ ಮಾರಾಟ ಸ್ಥಳ | 1,000 | 2,000 | |
| | (iv) | 500 ಚ.ಅ.ಗಿಂತ ಕಡಿಮೆ ಇರುವ ಚಿಲ್ಲರೆ ಮಾರಾಟ ಸ್ಥಳ | 500 | 1,000 | |
| 19 | ವೆಲ್ಡಿಂಗ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ | | 1,000 | 2,000 | |
| 20 | ನೀರಿನ ಟ್ಯಾಂಕರುಗಳು | | 1,000 | 2,000 | |
| | | ಭಾಗ ಸಂಖ್ಯೆ:–5 | | | |
| | ವ್ಯಾಪಾರ – ಆಹಾರೇತರ ಪದಾರ್ಥಗಳು – ನಿರ್ಮಾಣ/ಸಾಮಗ್ರಿಗಳು | | | | |
| 1 | (i) | ಇಟ್ಟಿಗೆ ಮೋಲ್ಡಿಂಗ್ ಅಥವಾ ಸುಡುವುದು | 5,000 | 10,000 | |
| | (ii) | ಸಿಮೆಂಟ್ ಇಟ್ಟಿಗೆ ತಯಾರಿಕೆ | 5,000 | 10,000 | |
| | (iii) | ವಿದ್ಯುತ್ ಬಳಸಿ ತಯಾರಿಸುವ ಎಲ್ಲಾ ಬಗೆಯ ಛಾವಣಿ ಟೈಲ್‌ಗಳು ಹಾಗೂ | 5,000 | 10,000 | |

| | | | | | |
|---|---|---|---|---|---|
| | | ಶೀಟ್‌ಗಳು | | | |
| | (iv) | ಕೈಗಳಿಂದ ತಯಾರಿಸುವ ಎಲ್ಲಾ ಬಗೆಯ ಛಾವಣಿ ಟೈಲ್ ಗಳು ಹಾಗೂ ಶೀಟ್ ಗಳು | 5,000 | 10,000 | |
| | (v) | ನಿರ್ಮಾಣ ಹಾಗೂ ಶೇಖರಣೆ ಸ್ಥಳ 5000 ಚ.ಅ.ಗಿಂತ ಹೆಚ್ಚಾಗಿರುವ, ವಿದ್ಯುತ್ ಬಳಸಿ ಅಥವಾ ಕೈಗಳಿಂದ ತಯಾರಿಸಿದ ಛಾವಣಿ ಟೈಲ್ ಹಾಗೂ ಶೀಟ್ ಗಳ ದಾಸ್ತಾನು | 3,000 | 5,000 | |
| | (vi) | ನಿರ್ಮಾಣ ಹಾಗೂ ಶೇಖರಣೆ ಸ್ಥಳ 2000 ಚ.ಅ.ಗಿಂತ ಹೆಚ್ಚಿದ್ದು, ಆದರೆ 5000 ಚ.ಅಡಿಗಿಂತ ಕಡಿಮೆ ಇರುವ, ವಿದ್ಯುತ್ ಬಳಸಿ ಅಥವಾ ಕೈಗಳಿಂದ ತಯಾರಿಸಿದ ಛಾವಣಿ ಟೈಲ್ ಹಾಗೂ ಶೀಟ್ ಗಳ ದಾಸ್ತಾನು | 2,000 | 3,000 | |
| | (vii) | ನಿರ್ಮಾಣ ಹಾಗೂ ಶೇಖರಣೆ ಸ್ಥಳ 1000 ಚ.ಅಡಿಗಿಂತ ಕಡಿಮೆ ಇರುವ, ವಿದ್ಯುತ್ ಬಳಸಿ ಅಥವಾ ಕೈಗಳಿಂದ ತಯಾರಿಸಿದ ಟೈಲ್ ಹಾಗೂ ಶೀಟ್ ಗಳ ದಾಸ್ತಾನು | 1,000 | 2,000 | |
| | (viii) | ಸುಣ್ಣ ಶೇಖರಣೆ | 500 | 1,000 | |
| | (ix) | ಗಾರೆ (ಸುಣ್ಣದಗಚ್ಚು) ಶೇಖರಣೆ | 500 | 1,000 | |
| | (x) | ಸಿಮೆಂಟ್ ಸಗಟು | 2,000 | 5,000 | |
| | (xi) | ಸಿಮೆಂಟ್ ಚಿಲ್ಲರೆ | 1,000 | 2,000 | |
| 2 | ಗ್ರಾನೈಟ್, ಮಾರ್ಬಲ್, ಮತ್ತು ಕಡಪಾ ಕಲ್ಲುಗಳ ಸಂಸ್ಕರಣೆ ಕತ್ತರಿಸುವ ಘಟಕಗಳು ಮತ್ತು ಶೇಖರಣೆ | | | | |
| | (i) | ನಿರ್ಮಾಣ ಸ್ಥಳ ಮತ್ತು ಶೇಖರಣೆ ಪ್ರದೇಶ 5000 ಚ.ಅ.ಗಿಂತ ಹೆಚ್ಚಾಗಿರುವುದು | 10,000 | 20,000 | |
| | (ii) | ನಿರ್ಮಾಣ ಸ್ಥಳ ಮತ್ತು ಶೇಖರಣೆ ಪ್ರದೇಶ 3000 ಚ.ಅ.ಗಿಂತ ಹೆಚ್ಚಾಗಿರುವುದು ಆದರೆ 5000 ಚ.ಅ.ಗಿಂತ ಕಡಿಮೆ | 5,000 | 10,000 | |
| | (iii) | ನಿರ್ಮಾಣ ಸ್ಥಳ ಮತ್ತು ಶೇಖರಣೆ ಪ್ರದೇಶ 3000 ಚ.ಅ.ಗಿಂತ ಹೆಚ್ಚಾಗಿರುವುದು ಆದರೆ 5000 ಚ.ಅ.ಗಿಂತ ಕಡಿಮೆ | 3,000 | 5,000 | |
| | (iv) | 1000 ಚ.ಅಡಿಗಿಂತ ಕಡಿಮೆ | 1,000 | 2,000 | |
| 3 | ಪೈಂಟ್, ಲ್ಯಾಕರ್ ಹಾಗೂ ಶೆಲಾಕ್ ತಯಾರಿಕೆ | | | | |
| | (a) | ಪೀಠೋಪಕರಣಗಳಿಗೆ ಬಳಸುವ ಪೈಂಟ್, ಲ್ಯಾಕರ್, ಶೆಲಾಕ್ ಮತ್ತು ಎಲ್ಲಾ ಬಗೆಯ ಹಾಗೂ ಬಣ್ಣದ ವಾರ್ನಿಶ್, ಟರ್ಪೆಂಟೈನ್, ಪುಟ್ಟಿ ಮತ್ತು ಅಂಥವು | 10,000 | 20,000 | |
| | (b) | ಪೀಠೋಪಕರಣಗಳಿಗೆ ಬಳಸುವ ಹಾರ್ಡ್‌ವೇರ್ | | | |
| | (i) | 100 ಅಥವಾ ಮೇಲ್ಪಟ್ಟು ಕಾರ್ಮಿಕರನ್ನು ಬಳಸುವ ತಯಾರಿಕಾ ಘಟಕಗಳು | 7,500 | 10,000 | |
| | (ii) | 50 ಕ್ಕಿಂತ ಹೆಚ್ಚು, ಆದರೆ 100 ಕ್ಕಿಂತ ಕಡಿಮೆ ಕಾರ್ಮಿಕರು | 5,000 | 7,500 | |
| | (iii) | 25 ಕ್ಕಿಂತ ಹೆಚ್ಚು, ಆದರೆ 50 ಕ್ಕಿಂತ ಕಡಿಮೆ ಕಾರ್ಮಿಕರು | 3,000 | 5,000 | |
| | (iv) | 10 ಕ್ಕಿಂತ ಕಡಿಮೆ ಕಾರ್ಮಿಕರು | 1,000 | 2,000 | |
| | (v) | ದಾಸ್ತಾನುದಾರರು(ಸಗಟು) | 1,000 | 2,000 | |
| 4 | ಮಾರಾಟಕ್ಕೆ ಟಾರ್ ಶೇಖರಣೆ | | 1,000 | 2,000 | |
| 5 | ಮರದ ದಿಮ್ಮಿ ಶೇಖರಣೆ ಮತ್ತು ಮಾರಾಟ | | | | |
| | (i) | ದಿಮ್ಮಿಗಳಲ್ಲಿ | 2,000 | 5,000 | |
| | (ii) | ಕತ್ತರಿಸಿದ ಗಾತ್ರದ ಶೇಖರಣೆ ಮತ್ತು ಮಾರಾಟಕ್ಕೆ | 1,000 | 3,000 | |
| | (iii) | ಸರ್ವೆ ಮರ ಬೊಂಬು, ಬಿದಿರು | 1,000 | 2,000 | |
| | ಭಾಗ ಸಂಖ್ಯೆ:-6 | | | | |
| | | ಭಾಗ 1 ರಿಂದ ಭಾಗ 5 ರವರೆಗೆ ನಿರ್ದಿಷ್ಟವಾಗಿ ನಮೂದಿಸಿರದ ಎಲ್ಲಾ ಆಹಾರ ಮತ್ತು ಆಹಾರೇತರ ವಸ್ತುಗಳು | | | |
| | | ತಯಾರಿಕೆ, ಸಂಸ್ಕರಣೆ, ಶೇಖರಣೆ, ಮಾರಾಟ | 10,000 | 25,000 | |
| | (i) | ಶೇಖರಣೆ ಮತ್ತು ಸೇವಾ ಪ್ರದೇಶ 2000 ಚ.ಅಡಿಗಿಂತ ಹೆಚ್ಚಾಗಿರುವ ಚಿಲ್ಲರೆ ಅಂಗಡಿ | 5,000 | 10,000 | |
| | (ii) | ಶೇಖರಣೆ ಮತ್ತು ಸೇವಾ ಪ್ರದೇಶ 1000 ರಿಂದ 2000 ಚ.ಅಡಿ ವರೆಗಿನ ಚಿಲ್ಲರೆ ಅಂಗಡಿ | 3,000 | 5,000 | |
| | (iii) | ಶೇಖರಣೆ ಮತ್ತು ಸೇವಾ ಪ್ರದೇಶ 500 ರಿಂದ 1000 ಚ.ಅಡಿ ವರೆಗಿನ ಚಿಲ್ಲರೆ ಅಂಗಡಿ | 2,000 | 3,000 | |
| | (iv) | ಶೇಖರಣೆ ಮತ್ತು ಸೇವಾ ಪ್ರದೇಶ 100 ರಿಂದ 500 ಚ.ಅಡಿಗಿಂತ ಚ.ಅಡಿಗಿಂತ ಕಡಿಮೆ ಇರುವ ಚಿಲ್ಲರೆ ಅಂಗಡಿ | 1,000 | 2,000 | |
| | (v) | ಶೇಖರಣೆ ಮತ್ತು ಸೇವಾ ಪ್ರದೇಶ 100 ಚ.ಅಡಿಗಿಂತ ಕಡಿಮೆ ಇರುವ ಚಿಲ್ಲರೆ ಅಂಗಡಿ | 500 | 1,000 | |

| | | | | | |
|---|---|---|---|---|---|
| | | ಭಾಗ ಸಂಖ್ಯೆ:-7 | | | |
| | ವಿದ್ಯುಚ್ಛಕ್ತಿ/ಜನರೇಟರ್ ಬಳಸಿ ಕೈಗಾರಿಕೆ ಹಾಗೂ ವಾಣಿಜ್ಯ ಉದ್ದೇಶಗಳಿಗೆ ವಿದ್ಯುತ್ ಚಾಲಿತ ಯಂತ್ರೋಪಕರಣಗಳಿಗೆ ಪರವಾನಗಿ | | | | |
| | ಅಶ್ವಬಲ (ಹೆಚ್.ಪಿ.) | | ಪರವಾನಗಿ ಶುಲ್ಕ | | |
| 1 | 1 ರಿಂದ 5 ಹೆಚ್.ಪಿ. (ಪ್ರತಿ ಹೆಚ್.ಪಿ.) | | 20 | 40 | |
| 2 | 6 ರಿಂದ 10 ಹೆಚ್.ಪಿ. (ಪ್ರತಿ ಹೆಚ್.ಪಿ.) | | 40 | 80 | |
| 3 | 11 ರಿಂದ 25 ಹೆಚ್.ಪಿ. (ಪ್ರತಿ ಹೆಚ್.ಪಿ.) | | 60 | 120 | |
| 4 | 26 ರಿಂದ 50 ಹೆಚ್.ಪಿ.(ಪ್ರತಿ ಹೆಚ್.ಪಿ.) | | 80 | 160 | |
| 5 | 51 ಮತ್ತು ಮೇಲ್ಪಟ್ಟು (ಪ್ರತಿ ಹೆಚ್.ಪಿ.) | | 100 | 200 | |
| | | ಭಾಗ ಸಂಖ್ಯೆ:-8 | | | |
| ನಿರಾಕ್ಷೇಪಣಾ ಪ್ರಮಾಣ ಪತ್ರ ಮನೋರಂಜನೆ ಹಾಗೂ ವ್ಯಾಪಾರ ಪ್ರದರ್ಶನಗಳಿಗೆ/ಇಂಧನ ಸ್ಟೇಷನ್ ಮತ್ತು ಇಂಧನ ಶೇಖರಣೆ/ಚಿತ್ರಮಂದಿರ ಮತ್ತು ಅಂಥವುಗಳಿಗೆ | | | ಪರವಾನಗಿ ಶುಲ್ಕ (ರೂ.ಗಳಲ್ಲಿ) | | |
| 1 | ಮನೋರಂಜನೆ | | | | |
| | (i) | ಸರ್ಕಸ್ – ವಾರಕ್ಕೆ ಅಥವಾ ಅದರ ಭಾಗಶ: | 1,000 | 2,000 | |
| | (ii) | ವ್ಯಾಪಾರ ಪ್ರದರ್ಶನ ವಾರಕ್ಕೆ ಅಥವಾ ಅದರ ಭಾಗಶ: (ಹೊರಾಂಗಣ) | 15,000 | 25,000 | |
| | (iii) | ವ್ಯಾಪಾರ ಪ್ರದರ್ಶನ ವಾರಕ್ಕೆ ಅಥವಾ ಅದರ ಭಾಗಶ: (ಒಳಾಂಗಣ) | 10,000 | 20,000 | |
| | (iv) | ಹೊರಾಂಗಣ ಸಂಗೀತ ಮತ್ತು ಅಂಥವುಗಳಿಗೆ ವಾರಕ್ಕೆ ಅಥವಾ ಅದರ ಭಾಗಶ: | 15,000 | 30,000 | |
| 2 | ಪಟಾಕಿ (ಸುಡುಮದ್ದು) | | | | |
| | (i) | ಸಗಟು ವ್ಯಾಪಾರ | 10,000 | 20,000 | |
| | (ii) | ಚಿಲ್ಲರೆ ಮಾರಾಟ | 5,000 | 5,000 | |
| 3 | ಚಿತ್ರಮಂದಿರಗಳಿಗೆ ಪರವಾನಗಿ ನವೀಕರಣ | | 1,000 | 2,000 | |
| 4 | ಇಂಧನ ಸ್ಟೇಷನ್ ಗಳು ಮತ್ತು ಇಂಧನ ಶೇಖರಣೆ | | 5,000 | 10,000 | |
| 5 | ಪಟ್ಟಿಯಲ್ಲಿ ಸೇರಿಸಿರದ ಇತರ ವ್ಯಾಪಾರಗಳು, ಆದರೆ ಬೃ.ಬೆಂ.ಮ.ಪಾ.ಯ ನಿರಾಕ್ಷೇಪಣಾ ಪ್ರಮಾಣಪತ್ರ ಅಗತ್ಯವಿರುವ ವ್ಯಾಪಾರಗಳು | | 2,000 | 4,000 | |

ಮೇಲ್ಕಂಡಂತೆ ಪ್ರಸ್ತಾಪಿಸಿರುವ ಉದ್ದಿಮೆ ಶುಲ್ಕ ಹೆಚ್ಚಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಉದ್ದಿಮೆ ಪರವಾನಿಗೆಗಳ ಶುಲ್ಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಮಿತಿಯು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಸದರಿ ಪರಿಷ್ಕೃತ ದರದ ಪಟ್ಟಿಯಲ್ಲಿನ ಕಲಂ-5ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಕೆಲವೊಂದು ಉದ್ದಿಮೆಗಳ ಪರವಾನಿಗೆ ಶುಲ್ಕವನ್ನು ಹೆಚ್ಚಿಸಿ/ಕಡಿಮೆ ಮಾಡಿ ನಮೂದಿಸಿರವಂತೆ ಹಾಗೂ ಭಾಗ-2ಲ್ಲಿನ 4(ii)ಎ, 6(iii)ಎ ಮತ್ತು ಭಾಗ-8ರಲ್ಲಿನ 3ಎ ಎಂಬ ನೂತನ ಉದ್ದಿಮೆಗಳನ್ನು ಅಳವಡಿಸಿಕೊಂಡಿರುವುದನ್ನು ಹೊರತುಪಡಿಸಿ, ಉಳಿದಂತೆ ಆಯುಕ್ತರ ಟಿಪ್ಪಣಿಯಲ್ಲಿನ ಕಲಂ-4ರಂತೆ ಪರಿಷ್ಕರಿಸಿರುವ ದರಗಳನ್ನು ಅಳವಡಿಸಿಕೊಳ್ಳುವುದು.

ಸಮಿತಿಯು ಉದ್ದಿಮೆ ಪರವಾನಿಗಿ ಶುಲ್ಕ ಪಾವತಿಸುವ ಮಾಲೀಕರುಗಳಿಗೆ ಅನುಕೂಲವಾಗುವಂತೆ ಉದ್ದಿಮೆ ಸ್ನೇಹಿ ಪರವಾನಿಗೆ ಶುಲ್ಕ ಪಾವತಿಸುವ ನೂತನ ಪದ್ದತಿಯನ್ನು ಜಾರಿಗೆ ತಂದಿದ್ದು, ಶುಲ್ಕ ಪಾವತಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉದ್ದಿಮೆ ಪರವಾನಿಗೆದಾರರ ವಿವೇಚನೆಗೆ ಒಳಪಟ್ಟು ಒಟ್ಟಾರೆ 1 ವರ್ಷದಿಂದ 3ವರ್ಷಗಳು ಅಂದರೆ ಒಂದೇ ಕಂತಿನಲ್ಲಿ 3ವರ್ಷಗಳ ಶುಲ್ಕ ಪಾವತಿಸುವ ಅಥವಾ 1 ವರ್ಷದಿಂದ 5ವರ್ಷಗಳು ಅಂದರೆ ಒಂದೇ ಕಂತಿನಲ್ಲಿ 5ವರ್ಷಗಳ ಶುಲ್ಕ ಪಾವತಿಸುವ ಆಯ್ಕೆಯನ್ನು ಪರವಾನಿಗೆದಾರರಿಗೆ ಬಿಡುವ ಷರತ್ತಿಗೆ ಅನುಗುಣವಾಗಿ ಈ ಅಂಶವನ್ನು ಅಳವಡಿಸಿಕೊಂಡು ಆಯುಕ್ತರು ಈ ಸಂಬಂಧ ಸೂಕ್ತ ಕ್ರಮವಹಿಸಲು ತಿಳಿಸುತ್ತಾ, ಕೆಳಕಂಡ ಕಲಂನ ಮಾರ್ಪಾಟುಗಳೊಂದಿಗೆ ಆಯುಕ್ತರ ದಿನಾಂಕ: 24-08-2015ರ ಟಿಪ್ಪಣಿಯನ್ನು ಒಪ್ಪುತ್ತಾ, ಈ ಪದ್ದತಿಯು 2016-ಜನವರಿ ಮಾಹೆಯಿಂದಲೇ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಿತು.

| ಕ್ರಮ ಸಂಖ್ಯೆ | | ಉದ್ದಿಮೆ ವಿವರ | ಹಾಲಿ ಇರುವ ಶುಲ್ಕ | ಪ್ರಸ್ತಾಪಿಸಿರುವ ಶುಲ್ಕ | ತೆ & ಆ ಸ್ಥಾ ಸಮಿತಿಯಿಂದ ಮಾರ್ಪಡಿಸಿರುವ ಶುಲ್ಕ | ಷರಾ |
|---|---|---|---|---|---|---|
| 1 | 2 | | 3 | 4 | 5 | 6 |
| | | ಭಾಗ ಸಂಖ್ಯೆ:– 1 | | | | |
| 5 | ಆಹಾರ ಪದಾರ್ಥ, ಪಾನೀಯಗಳು ಅಥವಾ ಮದ್ಯಸೇವೆ ಸಲ್ಲಿಸುವ/ಮಾರಾಟ ಮಾಡುವ/ಶೇಖರಿಸುವ ಹೋಟೆಲ್ಲುಗಳು, ರೆಸ್ಟೋರೆಂಟ್‌ಗಳು ಮತ್ತು ಎಲ್ಲಾ ಅಂಗಡಿಗಳು | | | | | |
| | (i) | ಎಲ್ಲಾ ತಾರಾ ಹೋಟೆಲ್‌ಗಳು 7 ಸ್ಟಾರ್ | 100,000 | 300,000 | 4,00,000 | |
| | (ii) | ಎಲ್ಲಾ ತಾರಾ ಹೋಟೆಲ್‌ಗಳು 5 ಸ್ಟಾರ್ | 100,000 | 250,000 | 3,00,000 | |
| | (x) | ಬಾರ್‌ನಲ್ಲಿ ಅಡಿಗೆ ಮನೆ ಇಲ್ಲದೇ ಕೇವಲ ಸ್ನಾಕ್ಸ್ ಸರಬರಾಜು ಮಾಡುವ ಹೋಟೆಲ್‌ಗಳು | 15,000 | 15,000 | 20,000 | |
| | (xvi) | ಕಾರ್ಖಾನೆಗಳಲ್ಲಿ, ನರ್ಸಿಂಗ್ ಹೋಮ್‌ಗಳಲ್ಲಿ ಮತ್ತು ಚಿತ್ರಮಂದಿರಗಳಲ್ಲಿರುವ ಕ್ಯಾಂಟಿನ್‌ಗಳು | 2,000 | 4,000 | 5,000 | |
| 6 | ಪ್ಯಾಕ್ ಮಾಡಲಾದ ಆಹಾರ ಪದಾರ್ಥಗಳು | | | | | |
| | (iv) | ಗೃಹ ಕೈಗಾರಿಕೆಯ ಉಪ್ಪಿನಕಾಯಿ, ಹಪ್ಪಳ, ಕಾಂಡಿಮೆಂಟ್ಸ್ ತಯಾರಿಕೆ, ಪ್ಯಾಕಿಂಗ್ ಶೇಖರಣೆ | 5,000 | 7,500 | 5,000 | |
| 7 | ಹಾಲು ಮತ್ತು ಹಾಲು ಉತ್ಪನ್ನಗಳ ಶೇಖರಣೆ ಮತ್ತು ಮಾರಾಟ | | | | | |
| | (i) | ಕಾರ್ಖಾನೆ ಕಾಯಿದೆಯಡಿ ಹಾಲು ಡೈರಿ | 10,000 | 20,000 | 10,000 | |
| 9 | ಅನಿಲಗೂಡಿಸಿದ ಪಾನೀಯ(ಸೋಡಾ), ಲಘು ಪಾನೀಯಗಳು ಹಾಗೂ ಬಾಟಲ್ ನೀರು | | | | | |
| | (iv) | ಬಾಟಲೀಕರಿಸಿದ ನೀರಿನ (ಖನಿಜಯುಕ್ತ ನೀರು) ತಯಾರಿಕೆ/ಸಂಸ್ಕರಣೆ | 25,000 | 50,000 | 60,000 | |
| | | ಭಾಗ ಸಂಖ್ಯೆ:– 2 | | | | |
| 2 | (ಎ) ಛತ್ರಗಳು, ಮದುವೆ ಮಂಟಪಗಳು, ಸಮಾವೇಶ ಕೇಂದ್ರ | | | | | |
| | (i) | ಒಟ್ಟು 15000 ಚ.ಅ ಗಿಂತ ಹೆಚ್ಚು. ನಿರ್ಮಿಸಲ್ಪಟ್ಟ ಪ್ರದೇಶ | 30,000 | 60,000 | 75,000 | |
| | | ಭಾಗ ಸಂಖ್ಯೆ:–3 | | | | |
| | ಆಹಾರೇತರ ಪದಾರ್ಥಗಳು – ವೈದ್ಯಕೀಯ | | | | | |
| 3 | ನರ್ಸಿಂಗ್ ಹೋಮ್ ಮತ್ತು ಆಸ್ಪತ್ರೆ | | | | | |
| | (i) | 200 ಹಾಸಿಗೆಗಿಂತ ಹೆಚ್ಚು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ/ಎನ್.ಎ.ಬಿ.ಹೆಚ್. | 10,000 | 40,000 | 50,000 | ಹೊಸ ಅನುಸೂಚಿ |
| | (ii) | 200 ಹಾಸಿಗೆಗಳಿಗಿಂತ ಹೆಚ್ಚು, ಇತರೆ ಆಸ್ಪತ್ರೆಗಳು | 10,000 | 20,000 | 25,000 | |
| 4 | (ಸಿ) ಡೆಂಟಲ್ ಕ್ಲೀನಿಕ್ | | | | | |
| | (ii)ಎ | ಡೆಂಟಲ್ ಕ್ಲೀನಿಕ್ ತಜ್ಞರ ಸೇವೆಯೊಂದಿಗೆ (**Specialist**) | | | 10,000 | |
| 5 | ಲ್ಯಾಬೊರೇಟರಿ(ರೋಗ ತಪಾಸಣಾ ಪ್ರಯೋಗಾಲಯ | | | | | |
| | (i) | 1000 ಚ.ಅಡಿ ಗಿಂತ ಹೆಚ್ಚು | 2,000 | 5,000 | 7,500 | |
| 6 | (iii)ಎ | ಹೆಲ್ತ್ ಕ್ಲಬ್ (ಜಿಮ್, ಸ್ಪಾ, ಏರೋಬಿಕ್ಸ್, ಮಸಾಜ್) & ಫಿಟ್‌ನೆಸ್ ಯುನಿಟ್ಸ್, 1200 ಚ.ಅಡಿ ಗಿಂತ ಕಡಿಮೆ | | | 5,000 | |
| | | ಭಾಗ ಸಂಖ್ಯೆ:–4 | | | | |
| 20 | ನೀರಿನ ಟ್ಯಾಂಕರುಗಳು | | 1,000 | 2,000 | 2,500 | |
| | | ಭಾಗ ಸಂಖ್ಯೆ:–5 | | | | |
| 2 | ಗ್ರಾನೈಟ್, ಮಾರ್ಬಲ್, ಮತ್ತು ಕಡಪಾ ಕಲ್ಲುಗಳ ಸಂಸ್ಕರಣೆ ಕತ್ತರಿಸುವ ಘಟಕಗಳು ಮತ್ತು ಶೇಖರಣೆ | | | | | |
| | (i) | ನಿರ್ಮಾಣ ಸ್ಥಳ ಮತ್ತು ಶೇಖರಣೆ ಪ್ರದೇಶ 5000 ಚ.ಅ.ಗಿಂತ ಹೆಚ್ಚಾಗಿರುವುದು | 10,000 | 20,000 | 25,000 | |
| 5 | ಮರದ ದಿಮ್ಮಿ ಶೇಖರಣೆ ಮತ್ತು ಮಾರಾಟ | | | | | |
| | (i) | ದಿಮ್ಮಿಗಳಲ್ಲಿ | 2,000 | 5,000 | 10,000 | |
| | (ii) | ಕತ್ತರಿಸಿದ ಗಾತ್ರದ ಶೇಖರಣೆ ಮತ್ತು ಮಾರಾಟಕ್ಕೆ | 1,000 | 3,000 | 5,000 | |
| | | ಭಾಗ ಸಂಖ್ಯೆ:–8 | | | | |
| | ನಿರಾಕ್ಷೇಪಣಾ ಪ್ರಮಾಣ ಪತ್ರ ಮನೋರಂಜನೆ ಹಾಗೂ ವ್ಯಾಪಾರ ಪ್ರದರ್ಶನಗಳಿಗೆ/ಇಂಧನ ಸ್ಟೇಷನ್ ಮತ್ತು ಇಂಧನ ಶೇಖರಣೆ/ಚಿತ್ರಮಂದಿರ ಮತ್ತು ಅಂಥವುಗಳಿಗೆ | | ಪರವಾನಗಿ ಶುಲ್ಕ (ರೂ.ಗಳಲ್ಲಿ) | | | |
| 3ಎ | ಮಾಲ್‌ಗಳಲ್ಲಿರುವ ಚಿತ್ರಮಂದಿರಗಳಿಗೆ ಪರವಾನಗಿ ನವೀಕರಣ | | | | 10,000 | |

***<u>02]. ವಿಷಯದ ಸಂಖ್ಯೆ: ತೆಆಸ್ಥಾಸ/02/2014–15</u>***

ಆಯುಕ್ತರ ದಿನಾಂಕ: 16.09.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ವಸ್ತುಗಳ ನಿರ್ವಹಣೆ) ರವರು ರಾಜ್ಯದ ನಗರ

ಸ್ಥಳೀಯ ಸಂಸ್ಥೆಗಳಿಗೆ 2015-16ನೇ ಸಾಲಿನ ಮೊದಲನೆ ಕಂತಿನ ಮುಕ್ತ ನಿಧಿ ಅನುದಾನದಲ್ಲಿ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸಿ 59 ಕಾಮಗಾರಿಗಳಿಗೆ ಒಟ್ಟು ರೂ.44.26 ಕೋಟಿಗಳಿಗೆ ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಂಡಿಕೆ 14 ರಲ್ಲಿ ವಿಶೇಷ ಆಯುಕ್ತರು ಘನತ್ಯಾಜ್ಯ ನಿರ್ವಹಣೆ ರವರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ನಅಇ/219/ಎಸ್.ಎಫ್.ಸಿ/2015 ಬೆಂಗಳೂರು ದಿನಾಂಕ 29-4-2015 ರಲ್ಲಿ 2015-16ನೇ ಸಾಲಿನ ಮೊದಲನೆ ಕಂತಿನ ಎಸ್.ಎಫ್.ಸಿ. ಮುಕ್ತ ನಿಧಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ.5443.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿ ಪಾಲಿಕೆಗೆ ಬಿಡುಗಡೆ ಮಾಡುವ ಮೊತ್ತವನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಬಳಸತಕ್ಕದ್ದು ಎಂದು ಆದೇಶಿಸಲಾಗಿದೆ.

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ದಿನಾಂಕ 10-9-2015ರ ನಡವಳಿ ವಿಷಯ ಸಂಖ್ಯೆ 200/2015-16 ರಂತೆ ಒಟ್ಟು 59 ಕಾಮಗಾರಿಗಳಿಗೆ ಒಟ್ಟು ರೂ.44.26 ಕೋಟಿಗಳಿಗೆ ಅನುಮೋದನೆ ನೀಡಿ ಸರ್ಕಾರದ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನದಲ್ಲಿ ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

2015-16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲ. ಮುಕ್ತ ನಿಧಿಯ ಅನುದಾನದಲ್ಲಿ ಸದರಿ ಕಾಮಗಾರಿಗಳ ವೆಚ್ಚಗಳನ್ನು ಭರಿಸಲು ಆಯವ್ಯಯದಲ್ಲಿ ವೆಚ್ಚದ ಭಾಗದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ 14ನೇ ಹಣಕಾಸು ಆಯೋಗ ಅನುದಾನದ ಲೆಕ್ಕ ಶೀರ್ಷಿಕೆ ಪಿ. 2200ನ್ನು ಈಗಾಗಲೇ ಘನತ್ಯಾಜ್ಯ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕಾಮಗಾರಿಗಳಿಗೆ ಬಳಸಲಾಗುತ್ತಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 59 ಕಾಮಗಾರಿಗಳಿಗೆ ಒಟ್ಟು ರೂ.3987.44 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದೆ. ಪ್ರಸ್ತುತ 2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದ್ದು, ಇದುವರೆವಿಗೆ ರೂ.991.70 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲಾಗಿದ್ದು, ಬಾಕಿ ರೂ.8.30 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಆದ್ದರಿಂದ, ಸದರಿ ಕಾಮಗಾರಿಗಳು ಘನತ್ಯಾಜ್ಯ ನಿರ್ವಹಣೆ ಅಭಿವೃದ್ಧಿ ಕಾಮಗಾರಿಗಳಾಗಿದ್ದು, ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಪ್ರಸ್ತಾಪಿತ ಒಟ್ಟು 59 ಕಾಮಗಾರಿಗಳ ಮೊತ್ತ ರೂ.3987.44 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ ಹೆಚ್ಚುವರಿ ಅನುದಾನ ರೂ.3987.44 ಲಕ್ಷಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ 310-16-000031 ರಿಂದ 310-16-000089 ರವರೆಗೆ ರೂ.3987.44 ಲಕ್ಷಗಳಿಗೆ ನೀಡಲಾಗಿದೆ. ಭರಿಸಲಾದ ವೆಚ್ಚವನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು.

ಮೇಲ್ಕಂಡಂತೆ ಹೆಚ್ಚುವರಿ ಅನುದಾನ ರೂ.3987.44 ಲಕ್ಷಗಳನ್ನು ಅಳವಡಿಸಿಕೊಂಡು ನೀಡಲಾದ ಕಾಮಗಾರಿ ಸಂಖ್ಯೆಗಳಿಗೆ ಮತ್ತು ಅನುದಾನಗಳಿಗೆ ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**-:ಮುಂದೂಡಿದೆ:-**

## ***03]. ವಿಷಯದ ಸಂಖ್ಯೆ: ತೆಆಸ್ಥಾಸ/03/2014-15***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07.10.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ವಸ್ತುಗಳ ನಿರ್ವಹಣೆ) ರವರು MSGP/Terrafarm ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಿಗೆ ಶುದ್ಧ ನೀರಿನ ಘಟಕಗಳನ್ನು ಕಲ್ಪಿಸುವ 44 ಕಾಮಗಾರಿಗಳಿಗೆ ಒಟ್ಟು ರೂ.275.44 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಂಡಿಕೆ 20 ರಲ್ಲಿ ವಿಶೇಷ ಆಯುಕ್ತರು ಘನತ್ಯಾಜ್ಯ ನಿರ್ವಹಣೆ ರವರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ನಅಇ/219/ಎಸ್.ಎಫ್.ಸಿ/2015 ಬೆಂಗಳೂರು ದಿನಾಂಕ 29-4-2015 ರಲ್ಲಿ 2015-16ನೇ ಸಾಲಿನ ಮೊದಲನೆ ಕಂತಿನ ಎಸ್.ಎಫ್.ಸಿ. ಮುಕ್ತ ನಿಧಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ.5443.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿ ಪಾಲಿಕೆಗೆ ಬಿಡುಗಡೆ ಮಾಡುವ ಮೊತ್ತವನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಬಳಸತಕ್ಕದ್ದು ಎಂದು ಆದೇಶಿಸಲಾಗಿದೆ.

2015-16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಮುಕ್ತ ನಿಧಿಯ ಅನುದಾನದಲ್ಲಿ ಸದರಿ ಕಾಮಗಾರಿಗಳ ವೆಚ್ಚಗಳನ್ನು ಭರಿಸಲು ಆಯವ್ಯಯದಲ್ಲಿ ವೆಚ್ಚದ ಭಾಗದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ 14ನೇ ಹಣಕಾಸು ಆಯೋಗ ಅನುದಾನದ ಲೆಕ್ಕ ಶೀರ್ಷಿಕೆ ಪಿ. 2200ನ್ನು ಈಗಾಗಲೇ ಘನತ್ಯಾಜ್ಯ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕಾಮಗಾರಿಗಳಿಗೆ ಬಳಸಲಾಗುತ್ತಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 44 ಕಾಮಗಾರಿಗಳಿಗೆ ಒಟ್ಟು ರೂ.275.44 ಲಕ್ಷಗಳಿಗೆ ಹೆಚ್ಚುವರಿ ಅನುದಾನವನ್ನು ಒದಗಿಸಿ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದೆ.

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ದಿನಾಂಕ 8-9-2015ರ ನಡವಳಿ ವಿಷಯ ಸಂಖ್ಯೆ 182/2015-16 ರಂತೆ ಒಟ್ಟು 44 ಕಾಮಗಾರಿಗಳಿಗೆ ಒಟ್ಟು ರೂ.449.04 ಲಕ್ಷಗಳಿಗೆ ಅನುಮೋದನೆ ನೀಡಿ 14ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ಕಾಮಗಾರಿ ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2015-16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಘನತ್ಯಾಜ್ಯ ಅಭಿವೃದ್ಧಿ ಕಾಮಗಾರಿಗಳಿಗೆ 2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದ್ದು, ಇದುವರೆವಿಗೆ ರೂ.991.70 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲಾಗಿದ್ದು, ಬಾಕಿ ರೂ.8.30 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

(ರೂ.ಲಕ್ಷಗಳಲ್ಲಿ)

| ಆಯವ್ಯಯ ಲೆಕ್ಕ ಶೀರ್ಷಿಕೆ | ಮೀಸಲಿರಿಸಿದ ಅನುದಾನ | ಕಾಮಗಾರಿ ಸಂಖ್ಯೆ ನೀಡಿರುವುದು | ಷರಾ |
|---|---|---|---|
| ಪಿ.2200 ಪುಟ 89 14ನೇ ಹಣಕಾಸು ಅನುದಾನ | 1000.00 | 991.70 | 8.30 ಲಕ್ಷ ಲಭ್ಯವಿರುತ್ತದೆ. |
| ಪಿ.2200 ಪುಟ 89 14ನೇ ಹಣಕಾಸು ಅನುದಾನ | - | 3987.44 | ಘಟನೋತ್ತರ ಅನುಮೋದನೆಗಾಗಿ ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿದೆ |
| ಪಿ.2200 ಪುಟ 89 14ನೇ ಹಣಕಾಸು ಅನುದಾನ | - | - | ರೂ449.04 ಲಕ್ಷಗಳ ಹೆಚ್ಚುವರಿ ಅನುದಾನಕ್ಕೆ ಅನುಮೋದನೆಗಾಗಿ ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿದೆ |
| ಪಿ.2200 ಪುಟ 89 14ನೇ ಹಣಕಾಸು ಅನುದಾನ | - | - | ಪ್ರಸ್ತುತ ರೂ.275.44 ಲಕ್ಷಗಳಿಗೆ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ |

ಆದ್ದರಿಂದ, MSGP/Terrafarm ತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಶುದ್ಧ ನೀರಿನ ಘಟಕಗಳನ್ನು ಕಲ್ಪಿಸುವ 44 ಕಾಮಗಾರಿಗಳ ಮೊತ್ತ ರೂ.275.44 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ ಹೆಚ್ಚುವರಿ ಅನುದಾನ ರೂ.275.44 ಲಕ್ಷಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ ನೀಡಬೇಕಾಗಿರುತ್ತದೆ ಹಾಗೂ ಭರಿಸಬಹುದಾದ ಹೆಚ್ಚುವರಿ ವೆಚ್ಚವನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹೆಚ್ಚುವರಿ ಅನುದಾನ ರೂ.275.44 ಲಕ್ಷಗಳನ್ನು ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ ನೀಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07–10–2015ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ: ತೆಆಸ್ಥಾಸ/04/2014–15*

ವಿಶೇಷ ಆಯುಕ್ತರು ಯೋಜನೆ ರವರ ದಿನಾಂಕ: 07.10.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ವಸ್ತುಗಳ ನಿರ್ವಹಣೆ) ರವರು MSGP/Terrafarm ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಗ್ರಾಮಗಳಿಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ 44 ಕಾಮಗಾರಿಗಳಿಗೆ ಒಟ್ಟು ರೂ. 449.04 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಂಡಿಕೆ 18ರಲ್ಲಿ ವಿಶೇಷ ಆಯುಕ್ತರು ಘನತ್ಯಾಜ್ಯ ನಿರ್ವಹಣೆ ರವರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ನಅಇ/219/ಎಸ್.ಎಫ್.ಸಿ/2015 ಬೆಂಗಳೂರು ದಿನಾಂಕ 29–4–2015 ರಲ್ಲಿ 2015–16ನೇ ಸಾಲಿನ ಮೊದಲನೆ ಕಂತಿನ ಎಸ್.ಎಫ್.ಸಿ. ಮುಕ್ತ ನಿಧಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ.5443.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿ ಪಾಲಿಕೆಗೆ ಬಿಡುಗಡೆ ಮಾಡುವ ಮೊತ್ತವನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಬಳಸತಕ್ಕದ್ದು ಎಂದು ಆದೇಶಿಸಲಾಗಿದೆ.

2015–16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಮುಕ್ತ ನಿಧಿಯ ಅನುದಾನದಲ್ಲಿ ಸದರಿ ಕಾಮಗಾರಿಗಳ ವೆಚ್ಚಗಳನ್ನು ಭರಿಸಲು ಆಯವ್ಯಯದಲ್ಲಿ ವೆಚ್ಚದ ಭಾಗದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ 14ನೇ ಹಣಕಾಸು ಆಯೋಗ ಅನುದಾನದ ಲೆಕ್ಕ ಶೀರ್ಷಿಕೆ ಪಿ. 2200ನ್ನು ಈಗಾಗಲೇ ಘನತ್ಯಾಜ್ಯ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕಾಮಗಾರಿಗಳಿಗೆ ಬಳಸಲಾಗುತ್ತಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 44 ಕಾಮಗಾರಿಗಳಿಗೆ ಒಟ್ಟು ರೂ.449.04 ಲಕ್ಷಗಳಿಗೆ ಹೆಚ್ಚುವರಿ ಅನುದಾನವನ್ನು ಒದಗಿಸಿ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದೆ.

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ದಿನಾಂಕ 8–9–2015ರ ನಡವಳಿ ವಿಷಯ ಸಂಖ್ಯೆ 182/2015–16 ರಂತೆ ಒಟ್ಟು 44 ಕಾಮಗಾರಿಗಳಿಗೆ ಒಟ್ಟು ರೂ.449.04 ಲಕ್ಷಗಳಿಗೆ ಅನುಮೋದನೆ ನೀಡಿ 14ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ಕಾಮಗಾರಿ ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2015–16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಘನತ್ಯಾಜ್ಯ ಅಭಿವೃದ್ಧಿ ಕಾಮಗಾರಿಗಳಿಗೆ 2015–16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದ್ದು, ಇದುವರೆವಿಗೆ ರೂ.991.70 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲಾಗಿದ್ದು, ಬಾಕಿ ರೂ.8.30 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

(ರೂ.ಲಕ್ಷಗಳಲ್ಲಿ)

| ಆಯವ್ಯಯ ಲೆಕ್ಕ ಶೀರ್ಷಿಕೆ | ಮೀಸಲಿರಿಸಿದ ಅನುದಾನ | ಕಾಮಗಾರಿ ಸಂಖ್ಯೆ ನೀಡಿರುವುದು | ಷರಾ |
|---|---|---|---|
| ಪಿ.2200 ಪುಟ 89 14ನೇ ಹಣಕಾಸು ಅನುದಾನ | 1000.00 | 991.70 | 8.30 ಲಕ್ಷ ಲಭ್ಯವಿರುತ್ತದೆ. |
| ಪಿ.2200 ಪುಟ 89 14ನೇ ಹಣಕಾಸು | – | 3987.44 | ಘಟನೋತ್ತರ ಅನುಮೋದನೆಗಾಗಿ ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿದೆ |

| | | | |
|---|---|---|---|
| ಅನುದಾನ | | | |
| ಪಿ.2200 ಪುಟ 89 14ನೇ ಹಣಕಾಸು ಅನುದಾನ | – | – | ಪ್ರಸ್ತುತ ರೂ449.04 ಲಕ್ಷಗಳ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ |

ಆದ್ದರಿಂದ, MSGP/Terrafarm ತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನವನ್ನು ಒದಗಿಸಿ ಪ್ರಸ್ತಾಪಿತ ಒಟ್ಟು 44 ಕಾಮಗಾರಿಗಳ ಮೊತ್ತ ರೂ.449.04 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ ಹೆಚ್ಚುವರಿ ಅನುದಾನ ರೂ.449.04 ಲಕ್ಷಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ ನೀಡಬೇಕಾಗಿರುತ್ತದೆ ಹಾಗೂ ಭರಿಸಬಹುದಾದ ಹೆಚ್ಚುವರಿ ವೆಚ್ಚವನ್ನು 2015–16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹೆಚ್ಚುವರಿ ಅನುದಾನ ರೂ.449.04 ಲಕ್ಷಗಳನ್ನು ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ ನೀಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 07.10.2015ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/05/2014–15***

ಆಯುಕ್ತರ ದಿನಾಂಕ: 08.10.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 18 ಎಸ್‌ಆರ್‌ಪಿ 2015, ದಿನಾಂಕ: 30.09.2015ರ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ 2012ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ: 01.07.2015 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇಕಡ 28.75 ರಿಂದ ಶೇಕಡ 32.5ಕ್ಕೆ ಹೆಚ್ಚಿಸಿ ಮಂಜೂರು ಮಾಡಲಾಗಿರುತ್ತದೆ.

ಹಾಗೂ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದ ಶೇಕಡ 28.75 ರಿಂದ ಶೇಕಡ 32.5ಕ್ಕೆ ಹೆಚ್ಚಿಸಿ ದಿನಾಂಕ: 01.07.2015 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲಾಗಿರುತ್ತದೆ.

ಸದರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಮುಖ್ಯ ಲೆಕ್ಕಾಧಿಕಾರಿಗಳು ಕಂಡಿಕೆ–(2)ರಲ್ಲಿ "ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 18 ಎಸ್‌ಆರ್‌ಪಿ 2015, ದಿ: 30–09–2015, ದಿನಾಂಕ: 01.07.2015 ರಿಂದ ಜಾರಿಗೆ ಬರುವಂತೆ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೆ ಅವರ ಮೂಲವೇತನದ ಶೇ. 3.75 ರಷ್ಟು ತುಟ್ಟಿಭತ್ಯೆಯನ್ನು ಮಂಜೂರು ಮಾಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 9923 ಖಾಯಂ ಅಧಿಕಾರಿ / ನೌಕರರುಗಳಿಗೆ ಪ್ರಸ್ತುತ ಮಾಹೆಯಾನ ಒಟ್ಟು ಮೂಲ ವೇತನ ರೂ. 15,29,66,533–00 ಗಳನ್ನು ವೆಚ್ಚ ಮಾಡಲಿದ್ದು, ಪಾಲಿಕೆಯ 2015–16ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ, ವೇತನ ಮತ್ತು ಇತರೇ ವೆಚ್ಚಗಳು ಲೆಕ್ಕಶೀರ್ಷಿಕೆಯಲ್ಲಿ ಶೇ. 3.75 ರಷ್ಟು ಹೆಚ್ಚುವರಿ ತುಟ್ಟಿಭತ್ಯೆಯನ್ನು ಅವಕಾಶ ಮಾಡಿಕೊಳ್ಳುವ ಸಲುವಾಗಿ ಮೇಲ್ಕಂಡ ಸರ್ಕಾರದ ಆದೇಶದನ್ವಯ ದಿನಾಂಕ: 01.07.2015 ರಿಂದ ಜಾರಿಗೆ ಬರುವಂತೆ ಮೂಲ ವೇತನದ ಶೇ. 3.75 ರಷ್ಟು ತುಟ್ಟಿಭತ್ಯೆಯನ್ನು ಪಾಲಿಕೆಯ ಅಧಿಕಾರಿ / ನೌಕರರುಗಳಿಗೆ ನೀಡುವುದರಿಂದ ಮಾಹೆಯಾನ ರೂ. 57,36,245–00 ಗಳು ಅಧಿಕವಾಗಿ ಹೆಚ್ಚಿನ

ವೆಚ್ಚವಾಗಲಿದೆ. ಸದರಿ ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರವರ ಅನುಮೋದನೆಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸುವ ಬಗ್ಗೆ ಮುಂದಿನ ಕ್ರಮವಹಿಸಬಹುದೆಂದು ತಿಳಿಸಿರುತ್ತಾರೆ."

ಆದುದರಿಂದ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 18 ಎಸ್‌ಆರ್‌ಪಿ 2015, ದಿನಾಂಕ: 30.09.2015ರ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸರ್ಕಾರಿ ಆದೇಶದ ಅನುಸಾರ ಕಾಲಕಾಲಕ್ಕೆ ತುಟ್ಟಿಭತ್ಯೆಯನ್ನು ಪಾವತಿಸುವುದು ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಖಾಯಂ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಅನ್ವಯವಾಗುವಂತೆ ಅಳವಡಿಸಿಕೊಂಡು ಪಾವತಿಸುವುದು ಹಾಗೂ ಇನ್ನೂ ಮುಂದೆ ಕಾಲಕಾಲಕ್ಕೆ ಸರ್ಕಾರದ ಆದೇಶದ ಅನ್ವಯ ನೀಡಲಾಗುವ ತುಟ್ಟಿಭತ್ಯೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪಾವತಿಸಿದ ನಂತರ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಸಮಿತಿಯು ತೀರ್ಮಾನಿಸಿತು.**

***06]. ವಿಷಯದ ಸಂಖ್ಯೆ: ತೆಆಸ್ಥಾಸ/06/2014-15***

ಆಯುಕ್ತರ ದಿನಾಂಕ: 15.10.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ರೀತಿಯ 283 ಅಧಿಕೃತ ಖಾಯಂ ವಾಹನ ಚಾಲಕರುಗಳಿಗೆ 2015ನೇ ಸಾಲಿನ ಆಯುಧ ಪೂಜಾ ದಿನದಂದು ವಾಹನಗಳ ಪೂಜೆಗಾಗಿ ಪೂಜಾ ಸಾಮಾಗ್ರಿಗಳ ವೆಚ್ಚಕ್ಕಾಗಿ ಹಾಗೂ ವಾಹನಗಳ ಶುದ್ಧಿಕರಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕಾರ್ಯಪಾಲಕ ಅಭಿಯಂತರರು (ಉಗ್ರಾಣ ಮತ್ತು ಕಾರ್ಯಾಗಾರ) ರವರ ವರದಿಯ ಮೇರೆಗೆ ವಿಶೇಷ ಆಯುಕ್ತರು (ಹಣಕಾಸು) ರವರು ನೀಡಿರುವ ವರದಿಯಲ್ಲಿ ಪಾಲಿಕೆಯ 283 ಅಧಿಕೃತ ಖಾಯಂ ವಾಹನಗಳಿಗೆ ರೂ.500/- ಮೊತ್ತವನ್ನು ಸಾಮಾನ್ಯ ವೆಚ್ಚದಲ್ಲಿ ಮಂಜೂರು ಮಾಡಬಹುದೆಂದು ವರದಿಯನ್ನು ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯಪಾಲಕ ಅಭಿಯಂತರರು (ಉಗ್ರಾಣ ಮತ್ತು ಕಾರ್ಯಾಗಾರ) ಮತ್ತು ವಿಶೇಷ ಆಯುಕ್ತರು (ಹಣಕಾಸು) ರವರು ನೀಡಿರುವ ವರದಿಗಳನ್ವಯ ಪಾಲಿಕೆಯ ಎಲ್ಲಾ ರೀತಿಯ 283 ಅಧಿಕೃತ ಖಾಯಂ ವಾಹನಗಳಿಗೆ ರೂ.500/- ಮೊತ್ತವನ್ನು 2015ನೇ ಸಾಲಿನ ಆಯುಧ ಪೂಜಾ ಸಾಮಾಗ್ರಿಗಳ ವೆಚ್ಚಕ್ಕಾಗಿ ಹಾಗೂ ವಾಹನಗಳ ಶುದ್ಧಿಕರಣಕ್ಕಾಗಿ ಮಂಜೂರು ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ

**ನಿರ್ಣಯ: ಆಯುಕ್ತರ ದಿನಾಂಕ: 15.10.2015ರ ಟಿಪ್ಪಣಿಯನ್ನು ಒಪ್ಪುತ್ತಾ, ಪ್ರತಿ ವರ್ಷವು ಸದರಿ ಮೊತ್ತವನ್ನು ಪಾವತಿಸುವುದೆಂದು ಸಮಿತಿಯು ತೀರ್ಮಾನಿಸಿತು.**

**ಸಹಿ/-**

(ಎಮ್. ಶಿವರಾಜು)

ಅಧ್ಯಕ್ಷರು

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ